೯. ಶಿಶುಕೇಂದ್ರಿತ ಶಿಕ್ಷಣ

ಮುಗ್ಧ ಮನಸ್ಸಿನ ಅಖಂಡತೆ ಮತ್ತು ಶಿಶುಕೇಂದ್ರಿತ ಶಿಕ್ಷಣ

ಇಡೀ ಜಗತ್ತಿನ ಅಸ್ತಿತ್ವದ ಕೇಂದ್ರವೇ ತಾನೆಂದು ಭಾವಿಸುವ ಮೂಲಕ ಮಗುವಿನ ಜೀವನ ಪ್ರಾರಂಭವಾಗುತ್ತದೆ. ಹಾಗಾಗಿ ಮಗು ಸಹಜವಾಗಿ ಜಡ-ಚೈತನ್ಯ, ಪ್ರಾಣಿ-ಸಸ್ಯ ಎಂಬ ಭೇದವಿಲ್ಲದೆ ಇಡೀ ಅಸ್ತಿತ್ವದ ಜೊತೆ ಒಂದು ಭಾವನಾತ್ಮಕ ತಾದಾತ್ಮ್ಯವನ್ನು ಸಾಧಿಸುತ್ತದೆ. ಅದಕ್ಕೆ ಈ ಅಸ್ತಿತ್ವದಲ್ಲಿ ಜಡವೆನ್ನುವುದು ಯಾವುದೂ ಇರುವುದಿಲ್ಲ. ಇದು ಒಂದು ಅದ್ಭುತವಾದ ಮನಃಸ್ಥಿತಿ. ಆದ್ದರಿಂದಲೇ ಮಗುವಿನ ಕಲಿಕೆಯ ಸಾಮರ್ಥ್ಯವೂ ಅಸಾಧಾರಣವಾಗಿರುತ್ತದೆ.

ಒಂದು ವೇಳೆ ಮಗುವಿನ ಈ ಭರವಸೆಯ ಬದುಕಿಗೆ ಸಂಚಕಾರ ಬಂದರೆ? ತಾನು ಇಡೀ ಅಸ್ತಿತ್ವವೇ ಆಗಿದ್ದೇನೆ ಎಂದು ಗುರುತಿಸಿಕೊಳ್ಳುವ ಸಂದರ್ಭದಲ್ಲೆಲ್ಲ ಮಗುವಿನ ಈ ಅಖಂಡತೆಯ ತಾದಾತ್ಮ್ಯವನ್ನು ಮುರಿದು 'ನೀನು ಕೇವಲ ಒಂದು ಬಿಡಿ ಭಾಗ' ಎಂದು ನಾವು ಅದರ ಗ್ರಹಿಕೆಯನ್ನು ಮೊಟಕುಗೊಳಿಸಿದರೆ? ಅದನ್ನು ಶಿಕ್ಷಣ ಎನ್ನಬೇಕೆ? ನಮ್ಮ ಶಿಕ್ಷಣ, 'ನೀನು ಅಖಂಡವಲ್ಲ, ಕೇವಲ ಒಂದು ಬಿಡಿಭಾಗ; ಹಾಗಾಗಿ ಬಿಡಿ ಭಾಗಗಳಿಗೆ ಇರಬೇಕಾದ ಜವಾಬ್ದಾರಿಗಳ ಹೊರೆ ನಿನ್ನ ಮೇಲಿದೆ; ನೀನು ಚರಿತ್ರೆ ಕಲಿಯಬೇಕು, ಭೂಗೋಳ ಕಲಿಯಬೇಕು, ವಿಜ್ಞಾನ ಕಲಿಯಬೇಕು, ಎಲ್ಲಕ್ಕಿಂತ ಮಿಗಿಲಾಗಿ ಇಂಗ್ಲಿಷ್-ಗಣಿತ ಕಲಿಯಬೇಕು' ಎಂದು ಒತ್ತಡ ಹೇರುತ್ತದೆ. ಹೀಗೆ ಶಿಕ್ಷಣ ಎಂಬುದು ಅಖಂಡವಾದುದನ್ನು ಮುರಿದು ಭಾಗಗಳಾಗಿ ವಿಂಗಡಿಸಿ ಮತ್ತೆ ಜೋಡಿಸುವ ಆಟವಾಗಿ ಪರಿಣಮಿಸುತ್ತದೆ.

ಈ ಒಂದು ಅನಿವಾರ್ಯ ವಿದ್ಯಮಾನವನ್ನು ಶಿಶುಕೇಂದ್ರಿತ ಶಿಕ್ಷಣ ಸ್ವಲ್ಪವಾದರೂ ಕಡಿಮೆ ಮಾಡಬಹುದು. ನಮ್ಮ ಶಾಲಾ ವಾತಾವರಣ ಮಗುವಿಗೆ ಹೊರೆಯಾಗುತ್ತದೆಂಬ ಕಾರಣದಿಂದ ಈ ಹೊರೆಯನ್ನು ಕಡಿಮೆ ಮಾಡಿ ಕಲಿಕೆ ಸಂತೋಷದಾಯವಾಗಿರಲು ಏನೆಲ್ಲಾ ಬದಲಾವಣೆಗಳನ್ನು ಮಾಡಬಹುದೋ ಅದನ್ನೆಲ್ಲಾ ಮಾಡುವ ಪ್ರಯತ್ನ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿದೆ. 'ಶಿಶುಕೇಂದ್ರಿತ ಶಿಕ್ಷಣ'ದ ಪ್ರಯತ್ನ ಇವುಗಳಲ್ಲಿ ಅತಿಮುಖ್ಯ. ಅವರಲ್ಲೂ ಒಂದು-ಎರಡನೇ ತರಗತಿಯಲ್ಲಿರುವ ಮಕ್ಕಳಿಗೆ ಇದು ಬಹಳ

ಮುಖ್ಯವಾದೀತು. ಅದರ ನಂತರವೂ ಮಗುವೇ ತರಗತಿಯ ಕೇಂದ್ರಬಿಂದುವಾಗಿ ಉಳಿಯುವುದು ಬಹಳ ಮುಖ್ಯ. ಮಕ್ಕಳನ್ನು ಗುಡ್ಡೆ ಹಾಕಿಕೊಂಡು ಕಪ್ಪುಹಲಗೆಯ ಬಳಿಯೇ ನಿಲ್ಲುವ ಅಧ್ಯಾಪಕ ಜೋರುದನಿಯಲ್ಲಿ ಸಹಜವಾಗಿ ಹೇಳಬಹುದಾದದ್ದನ್ನೆಲ್ಲಾ ಅಸಹಜವಾಗಿ, ಪುಸ್ತಕೀಯವಾಗಿ ಹೇಳುತ್ತಾ ಹೋಗುತ್ತಾನೆ. ಅವನು ಮಕ್ಕಳನ್ನು ಉದ್ದೇಶಿಸಿ ಮಾತನಾಡುವುದು 'ಗಲಾಟೆ ಮಾಡಬೇಡಿ' ಎಂದು ಕೂಗಿಕೊಳ್ಳುವಾಗ ಮಾತ್ರ. ಉಳಿದ ವೇಳೆಯಲ್ಲಿ ಪಾಠ ಸ್ವಗತವಾಗಿರುತ್ತದೆ. ಸಂವಹನದ ಕಿರು ಸಂಕಲ್ಪವನ್ನಾದರೂ ಈ ಅಧ್ಯಾಪಕರು ಮಾಡಿಕೊಂಡರೆ ಇವರು ತಮ್ಮ ಪ್ರವಚನ ಶೈಲಿಯನ್ನು ಬಿಟ್ಟು ಮಕ್ಕಳ ನಡುವೆ ಹೋಗಿ ಕುಳಿತುಕೊಳ್ಳುತ್ತಾರೆ. ಮಕ್ಕಳ ಜೊತೆ ನಿಜವಾಗಿಯೂ ಮಾತನಾಡುತ್ತಾರೆ. ಕಲಿಕೆಯಲ್ಲಿ ಮಕ್ಕಳು-ಅಧ್ಯಾಪಕ ಇಬ್ಬರೂ ಒಂದಾಗಿ ತಮ್ಮನ್ನು ತಾವೇ ಮರೆಯುತ್ತಾರೆ. ಇಂತಹ ಕಲಿಕೆಯ ಪ್ರಕ್ರಿಯೆಯಲ್ಲಿ ಮಕ್ಕಳ ಅಭಿವ್ಯಕ್ತಿಗೂ ಅವಕಾಶವಿರುತ್ತದೆ. ಅಧ್ಯಾಪಕನಾದವನು ಸಾಧ್ಯವಾದಷ್ಟು ತಟಸ್ಥನಾಗಿ ಮಗುವಿನ ಹುಡುಕಾಟಕ್ಕೆ ನೆರವಾಗುತ್ತಾನೆ. ಮಗುವಿನ ಸ್ವತಂತ್ರ ಅಭಿಪ್ರಾಯಗಳು ತರಗತಿಯಲ್ಲಿ ಎದ್ದುಕೇಳುವಂತೆ ತನ್ನ ಧ್ವನಿಯನ್ನು ಕಡಿಮೆ ಮಾಡಿ ಸಂಯಮದಿಂದ ವರ್ತಿಸುತ್ತಾನೆ. 'ತರು ತಳೆದ ಪುಷ್ಪದಂತೆ' ಮಗು ಸಹಜವಾಗಿ ಕಲಿಯುತ್ತದೆ. ಮಗು ಮತ್ತು ಅದು ಸಂಪಾದಿಸಿದ ಜ್ಞಾನ ಹೂವಾಗಿ, ಕಾಯಾಗಿ, ಹಣ್ಣಾಗುವ ತನಕ ಸಹಜಕ್ರಿಯೆಯ ಸರಣಿಯಲ್ಲಿ, ನಿಜಜೀವನ ಪ್ರಸಂಗದಲ್ಲಿ ಒದಗಿಬರುತ್ತದೆ. ಜ್ಞಾನ ತರು ತಳೆದ ಪುಷ್ಪವಾಗಬೇಕು. ಕೃತಕವಾಗಿ ಅಂಟಿಸಿಕೊಂಡ ಹೂವಾಗಬಾರದು. ಎಂದರೆ ಜ್ಞಾನದ ಜೊತೆ ಒಂದು ಸಾವಯವ ಸಂಬಂಧ ಸಾಧ್ಯವಾಗಬೇಕು. ದಂಡೆದಂಡೆ ಹೂವನ್ನು ತಲೆಗೆ ಮುಡಿದುಕೊಂಡರೆ ಮರುದಿನವೇ ಒಣಗಿಹೋಗುತ್ತದೆ. ತರಗತಿಯ ಸಂದರ್ಭದಲ್ಲಿ ಹೇಳಬೇಕೆಂದರೆ, ಪರೀಕ್ಷೆ ಮುಗಿದ ಕೂಡಲೇ ಮರೆತುಹೋಗುತ್ತದೆ. ಐನ್‌ಸ್ಟೈನ್ ಹೇಳುತ್ತಾರೆ: "ಶಾಲೆಯಲ್ಲಿ ಕಲಿತದ್ದನ್ನೆಲ್ಲಾ ಮರೆತ ಮೇಲೆ ಏನು ಉಳಿದುಕೊಳ್ಳುವುದೋ ಅದೇ ಶಿಕ್ಷಣ" ಅಂದರೆ ಮಗುವಿಗೆ ಯಾವ ಕಲಿಕೆ ಗಾಢ ಅನುಭವವನ್ನು ಉಂಟು ಮಾಡುತ್ತದೋ ಅದು ಶಾಲಾ ಶಿಕ್ಷಣದ ನಂತರವೂ ಉಳಿದುಕೊಳ್ಳುತ್ತದೆ. ಶಿಕ್ಷಣ ಎಂಬುದು ಕೇವಲ ನೆನಪಿನಾಟ ಮಾತ್ರವಾದಾಗ ಮರೆತುಹೋಗುತ್ತದೆ. ಮೇಲೆ ಹೇಳಿದ ಹೋಲಿಕೆಯಿರುವ' ಮಂಕುತಿಮ್ಮನ 'ಮಂಕುತಿಮ್ಮನ ಕಗ್ಗ'ದ ಪದ್ಯದ ಪೂರ್ಣ ಪಾಠ ಹೀಗಿದೆ:

ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ ।
ಚಿತ್ತದೊಳು ಬೆಳೆದರಿವು ತರು ತಳೆದ ಪುಷ್ಪ ॥
ವಸ್ತು ಸಾಕ್ಷಾತ್ಕಾರವಂತರೀಕ್ಷಣೆಯಿಂದ ।
ಶಾಸ್ತ್ರತನದಿಂದಲ್ಲ – ಮಂಕುತಿಮ್ಮ ॥ (ಪದ್ಯ. ೬೫)

ನೆನಪಲ್ಲ, ಅನುಭವವೇ ಶಿಕ್ಷಣ

ಶಿಶುಕೇಂದ್ರಿತ ಶಿಕ್ಷಣದ ಉದ್ದೇಶ ಮಗುವಿಗೆ ಅನುಭವ ಜ್ಞಾನವನ್ನು ಕೊಡುವುದು. ಇದೇ ನಿಜವಾದ ಕಲಿಕೆ. ಒಂದು ನಿರ್ದಿಷ್ಟ ಜೀವನದೃಷ್ಟಿಯನ್ನು ಹೊಂದಿರುವ ಅಧ್ಯಾಪಕ ಮಾತ್ರ ಶಿಶುಕೇಂದ್ರಿತ ತರಗತಿಯನ್ನು, ಎಂದರೆ ಶಿಶುಕೇಂದ್ರಿತವಾದ ಕಲಿಕೆಯ ವಾತಾವರಣವನ್ನು ನಿರ್ಮಿಸಬಲ್ಲ. ಅವನ ಶಿಕ್ಷಣದ ನಿರೀಕ್ಷೆಗಳು ಸಾಂಪ್ರದಾಯಿಕ ಪರೀಕ್ಷಾಪದ್ಧತಿಯ ನಿರೀಕ್ಷೆಗಳಿಗಿಂತ ಬೇರೆಯೇ ಆಗಿರುತ್ತವೆ. ಇವನು ಭಾವಿಸುತ್ತಾನೆ– ಚರಿತ್ರೆ, ಭೂಗೋಳ, ವಿಜ್ಞಾನ, ಗಣಿತ, ನ್ಯಾಯ – ಇವೆಲ್ಲಾ ಮಗುವಿಗಾಗಿ ಇವೆಯೇ ಹೊರತು ಮಗು ಹುಟ್ಟಿದ್ದು ಇದನ್ನು ಕಲಿಯಬೇಕು ಎಂಬ ಉದ್ದೇಶದಿಂದ ಅಲ್ಲ. ಈ ವಿಷಯಗಳನ್ನು ಕಲಿಯುವ ಮಗು ಮುಖ್ಯವೇ ಹೊರತು ಮಗು ಕಲಿಯಬೇಕಾದ ಈ ವಿಷಯಗಳಲ್ಲ. ತೀವ್ರ ಅಪರಾಧಿಪ್ರಜ್ಞೆಯಲ್ಲಿ ಬಳಲುವ ಜನ ಅಧ್ಯಾಪಕರಾದರೆ ಅವರು ಈ ಎಲ್ಲ ವಿಷಯಗಳನ್ನು ಮಗು ಕಲಿಯಲೇಬೇಕೆಂಬ ಒಂದು ಜವಾಬ್ದಾರಿಯ ಹೊರೆಯನ್ನು ಮಗುವಿನ ಮೇಲೆ ಹೊರಿಸುತ್ತಾರೆ. ಹೀಗೆ ಜವಾಬ್ದಾರಿಯ ಹೊರೆಯನ್ನು ಹೊರಿಸುವ ಮೂಲಕ ತರಗತಿಯನ್ನು ಮಕ್ಕಳ ಮಟ್ಟಿಗೆ ಒಂದು ಆತಂಕದ ಗೂಡನ್ನಾಗಿ ಮಾಡಿಬಿಡುತ್ತಾರೆ. ಇಂತಹ ಅಧ್ಯಾಪಕರು ಕೋಲು ಝಳಪಿಸುತ್ತ ಮಕ್ಕಳನ್ನು ಆತಂಕಕ್ಕೆ ಗುರಿಮಾಡುವುದರಿಂದ ಈ ಶಿಕ್ಷಣ ಎಂಬ ಹಿಂಸೆಯಿಂದ ತಪ್ಪಿಸಿಕೊಂಡರೆ ಸಾಕಪ್ಪ ಎಂದು ಮಕ್ಕಳು ಭಾವಿಸುವಂತಾಗುತ್ತದೆ. ಇಂತಹ ವಾತಾವರಣದಲ್ಲಿ ಮಕ್ಕಳು ತಮಗಿದ್ದ ಕಲಿಕೆಯ ಸಾಮರ್ಥ್ಯವನ್ನು ಕಳೆದುಕೊಂಡು ಅಧ್ಯಾಪಕರನ್ನು ತೃಪ್ತಿಗೊಳಿಸುವ ಬಾಯಿಪಾಠದಲ್ಲಿ ತೊಡಗುತ್ತಾರೆ. ಕೊನೆಗೆ ಜೀವನವಿಡೀ ತಮ್ಮ ಕಲಿಯುವ ಕೌತುಕವನ್ನೇ ಕಳೆದುಕೊಳ್ಳುತ್ತಾರೆ.

ಇಂತಹ ಅಧ್ಯಾಪಕರ ಜೀವನದೃಷ್ಟಿಯಾದರೂ ಎಂತಹುದು? ಇವರು ಮಕ್ಕಳಿಂದ ಶೈಕ್ಷಣಿಕವಾಗಿ ನಿರೀಕ್ಷಿಸುವುದಾದರೂ ಏನನ್ನು? ಉಸಿರು ಕಟ್ಟಿಸುವ ಇಕ್ಕಟ್ಟಾದ ಜೀವನದೃಷ್ಟಿಗೆ ಹೊಂದಿಕೊಂಡಿರುವ ಇವರ ಜೀವನಸಿದ್ಧಾಂತ ಮಕ್ಕಳನ್ನು ಗಂಭೀರವಾಗಿ ಪರಿಗಣಿಸಲು ಅವಕಾಶ ನೀಡುತ್ತದೆಯೇ? ನಿಜವಾದ ಶಿಕ್ಷಣ ತರಗತಿಯಲ್ಲಿ ಸಾಧ್ಯವಾಗಬೇಕಾದರೆ ನಮ್ಮ ಅಧ್ಯಾಪಕರು ತಮ್ಮ ಜೀವನದೃಷ್ಟಿಯನ್ನು ವಿಸ್ತರಿಸಿಕೊಳ್ಳಲು ನೆರವಾಗುವ ತರಬೇತಿಗಳು, ಚರ್ಚೆಗಳು ನಡೆಯಬೇಕು. ದೇಶದ ಬೇರೆ ಬೇರೆ ಭಾಗಗಳಲ್ಲಿ ಆಗುತ್ತಿರುವ ಸೃಜನಶೀಲ ಶೈಕ್ಷಣಿಕ ಪ್ರಯೋಗಗಳನ್ನು ಅಧ್ಯಾಪಕರು ಹೋಗಿ ನೋಡಬೇಕು. ಇದರಲ್ಲಿ ತೊಡಗಿಸಿಕೊಂಡಿರುವ ಅಸಾಧಾರಣ ವ್ಯಕ್ತಿಗಳೊಡನೆ ಮಾತನಾಡಿ ಅವರನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಜೊತೆಗೆ ತಾವೂ ಈ ನಿಟ್ಟಿನಲ್ಲಿ ಸ್ವತಂತ್ರ ಕೊಡುಗೆಗಳನ್ನು ಕೊಡಬಹುದೇ ಎಂದು ತಮ್ಮದೇ ಸಾಧ್ಯತೆಗಳನ್ನು ಕಂಡುಕೊಳ್ಳಬೇಕು.

ನಮ್ಮ ಅಧ್ಯಾಪಕರು ಪ್ರತಿಯೊಂದನ್ನೂ ಮಕ್ಕಳಿಗೆ ತಾವೇ ಕಲಿಸಬೇಕೆಂಬ ವೃತ್ತಿನಿಷ್ಠೆಯನ್ನು ಮೈಗೂಡಿಸಿಕೊಂಡಿರುವಂತೆ ಕಾಣುತ್ತದೆ. ಮಗು ಒಂದು ವಿಷಯವನ್ನು ಗ್ರಹಿಸಲು ಪ್ರಯತ್ನ ಪಡುವುದಕ್ಕೂ ಕಾಲಾವಕಾಶ ನೀಡದೆ ಬಾಯಿಪಾಠ ಮಾಡಿಸಿಬಿಡುತ್ತಾರೆ.

ಹೀಗಾಗಿ ಶಾಲೆಗಳಲ್ಲಿ ಕಲಿಯುವುದು ಎಂದರೆ ಕೆಲವು ಪದಗಳನ್ನು ಬಾಯಿಪಾಠ ಮಾಡಿ ಪುನರುಚ್ಚರಿಸುವುದು ಎಂಬ ತೀರ್ಮಾನಕ್ಕೆ ಮಕ್ಕಳು ಬರಲೇಬೇಕಾಗುತ್ತದೆ. ಶಿಶುಕೇಂದ್ರಿತ ತರಗತಿಯಲ್ಲಿ ಮಕ್ಕಳು ಬಹುಮುಖ್ಯರಾಗುತ್ತಾರೆ. ಆದರೆ ಅಧ್ಯಾಪಕನೇ ತರಗತಿಯ ಕೇಂದ್ರವ್ಯಕ್ತಿಯಾದಾಗ ಮಗುವಿಗಿಂತ ಮಗು ಕಲಿತದ್ದನ್ನು ಪುನರುಚ್ಚರಿಸುವುದೇ ಮುಖ್ಯವಾಗುತ್ತದೆ. ಏಕೆಂದರೆ ಅಧ್ಯಾಪಕನ ಸಾರ್ಥಕತೆ, ತಾನೊಬ್ಬ ಯಶಸ್ವಿ ಅಧ್ಯಾಪಕ ಎಂಬುದು ರುಜುವಾತಾಗುವುದು ಮಗು ಕಲಿತದ್ದನ್ನು ತಡಮಾಡದೆ ಪುನರುಚ್ಚರಿಸಿದಾಗ ಮಾತ್ರ. ಇಲ್ಲಿ ಅಧ್ಯಾಪಕ ತನ್ನ ಯಶಸ್ಸನ್ನೇ ಗುರಿಯಾಗಿಟ್ಟುಕೊಂಡು ಕೆಲಸ ಮಾಡುತ್ತಾನೆ. ಅಧ್ಯಾಪಕನ ಯಶಸ್ಸಿಗೆ ಮಗು ಒಂದು ಸಾಧನವಾಗಿ ಮಾತ್ರ ಉಳಿಯುತ್ತದೆ. ಹಾಗಾಗಿ ಮಗು ಸ್ವತಂತ್ರ ವ್ಯಕ್ತಿತ್ವವಿಲ್ಲದ, ಸ್ವಂತ ಅಭಿಪ್ರಾಯವಿಲ್ಲದ, ಸದಾ 'ದೊಡ್ಡವರನ್ನು' ಓಲೈಸುವ ಅಥವಾ ಗೌರವಿಸುವ ಒಂದು ಮಾದರಿ ವಿದ್ಯಾರ್ಥಿಯಾಗಿ ಬೆಳೆಯುತ್ತದೆ. ತನ್ನ ಎದುರಿಗೆ ಇರುವ ಇದೇ ಬಗೆಯ ಅನುಸರಣೀಯ ಮಾದರಿಗಳ ಎರಡನೇ ದರ್ಜೆಯ ನಕಲಾಗಿ ಈ ಮಕ್ಕಳು ಕೊನೆಗೊಳ್ಳುತ್ತಾರೆ. ಇಂತಹ ಒಂದು ವಾತಾವರಣದಲ್ಲಿ ಮಗು ತನ್ನ ಸ್ವಂತ ಅಭಿರುಚಿಯನ್ನು ಬೆಳೆಸಿಕೊಳ್ಳಲಾರದು. ಇಲ್ಲಿ ಮಗು ದೊಡ್ಡವರ ನಿರೀಕ್ಷೆಗಾಗಿ ತನ್ನ ಸಂತೋಷವನ್ನೇ ಬಲಿಕೊಡುತ್ತದೆ. ಈ ವಿದ್ಯಮಾನವನ್ನು ಅರಿಯಲು ಈ ಮುಂದಿನ ನೈಜಘಟನೆಯನ್ನು ನೋಡೋಣ.

ವಂದನಾಳ ಸಮಸ್ಯೆ

ನಮ್ಮ ಐದು ವರ್ಷದ ವಂದನಾ ಬಹಳ ಜಾಣೆ. ನಾಟಕ, ಡ್ಯಾನ್ಸ್, ಹಾಡು ಎಲ್ಲದರಲ್ಲೂ ಭಾಗವಹಿಸುತ್ತಾಳೆ. ಒಂದು ದಿನ ಈಕೆ ತನ್ನ ಬಣ್ಣ ಹಚ್ಚುವ ಪುಸ್ತಕ ಹಿಡಿದು ಆತಂಕದ ದನಿಯಲ್ಲಿ ಕೇಳಿದಳು: 'ಅಣ್ಣ, ನಾನು ಇದಕ್ಕೆ ಬಣ್ಣ ಹಚ್ಚಬೇಕು; ಯಾವ ಬಣ್ಣ ಹಚ್ಚಲಿ?' ಅದೊಂದು ಕೋಳಿ, ಮೀನು ಇತ್ಯಾದಿ ಪ್ರಾಣಿಗಳ ಚಿತ್ರ.

ನನಗೆ ಆಶ್ಚರ್ಯವಾಯಿತು. ನಿನಗೆ ಇಷ್ಟವಾದ ಬಣ್ಣ ಹಾಕು ಎಂದು ಹುರಿದುಂಬಿಸಿದೆ. ಆತಂಕದ ಧ್ವನಿ ಹೆಚ್ಚಾಯಿತು. ಯಾವುದೋ ಬಿಡಿಸಲಾರದ ಸಮಸ್ಯೆ ಕಾಡುತ್ತಿದೆಯೇನೋ ಎಂಬಂತೆ ಧ್ವನಿ ಮಾಡಿ, 'ಇಲ್ಲ ಅಣ್ಣ, ನನಗೆ ಅರ್ಥವಾಗ್ತಾ ಇಲ್ಲ, ಯಾವ ಬಣ್ಣ ಹಚ್ಚಲಿ?' ಎಂದಳು. ಅಲ್ಲೇ ಇವಳಂತೆಯೆ ಇರುವ ಇತರ ಮಕ್ಕಳು ತಮ್ಮ ತಮ್ಮ ಪುಸ್ತಕಕ್ಕೆ ಬಣ್ಣ ಹಚ್ಚುತ್ತಿದ್ದರು. ಬೇಕಾದಷ್ಟು ಬಣ್ಣಬಣ್ಣದ ಕ್ರೇಯಾನ್‌ಗಳು ನೆಲದ ಮೇಲೆಲ್ಲ ಹರಡಿ ಬಿದ್ದಿವೆ. ಆದರೆ ಬಣ್ಣ ಹಚ್ಚಲು ಅರ್ಥವಾಗುತ್ತಿಲ್ಲ!

ಈ ಸಮಸ್ಯೆಯ ಆಳ ಹುಡುಕಿನೋಡಿದೆ. ಮಕ್ಕಳು ತಮ್ಮ ಖುಷಿಗಾಗಿ ಬಣ್ಣ ಹಚ್ಚುತ್ತಾರೆ; ತಮ್ಮ ಖುಷಿಗಾಗಿ ಚಿತ್ರ ಬಿಡಿಸುತ್ತಾರೆ. ಆದರೆ ಇವಳ ಆತಂಕದ ದನಿ ನೋಡಿದಾಗ ಬಣ್ಣ ಹಚ್ಚಿದ್ದರ ಪರಿಣಾಮ ಎದುರಿಸಬೇಕು, ಆದ್ದರಿಂದ ಈ ಕೆಲಸವನ್ನು ಸರಿಯಾಗಿ ಮಾಡಿ ಮುಗಿಸಬೇಕು ಎಂಬ ಕರ್ತವ್ಯ ದೃಷ್ಟಿ ಎದ್ದು ಕಾಣುತ್ತಿತ್ತು.

ಸಹಜವಾಗಿ ನೋಡಿದರೆ ತಮ್ಮ ಖುಷಿಗಾಗಿ ಈ ಎಲ್ಲವನ್ನೂ ಮಡುವ ಮಕ್ಕಳ ತನ್ಮಯತೆಯಲ್ಲಿ ವರ್ತಮಾನ ಮಾತ್ರ ಇರುತ್ತದೆ. ಭೂತ-ಭವಿಷ್ಯತ್ತು ಕಾಲಗಳ ಪಾತ್ರ ಕಡಿಮೆ. ಹೀಗೆ ಖುಷಿಗಾಗಿ ಮಾಡಿದ ಕೆಲಸ ಅಥವಾ ಚೇಷ್ಟೆ – ಇವುಗಳಲ್ಲೇ ನಿಜವಾದ ಕಲಿಕೆ ಸಾಧ್ಯ. ಎಲ್ಲದಕ್ಕೂ ಕಡಿವಾಣ ಹಾಕುವ ದೊಡ್ಡವರ ಹೆದರಿಕೆಯಿಂದಾಗಿ ಮಕ್ಕಳಲ್ಲಿ 'ಬಾಧ್ಯತೆ'ಯ ಪರಿಕಲ್ಪನೆ ಮೂಡುತ್ತದೆ. ಮಗು ತನ್ನ ಸಂತೋಷಕ್ಕಾಗಿ ಮಾಡುವುದಕ್ಕಿಂತ 'ಮಿಸ್' ಅಥವಾ 'ಅಮ್ಮ'ನ ಒಪ್ಪಿಗೆ ಪಡೆಯಲು ಎಲ್ಲವನ್ನೂ ಮಾಡಬೇಕಾಗುತ್ತದೆ. ಇದನ್ನು ಧಿಕ್ಕರಿಸಿ ತನಗೆ ಅನ್ನಿಸಿದ್ದನ್ನು ಅದು ಮಾಡಿದಾಗ ಅದು ಚೇಷ್ಟೆ-ತುಂಟತನವಾಗಿಬಿಡುತ್ತದೆ.

ಹಾಗಾಗಿ ಈ ವಯಸ್ಸಿನ ಮಕ್ಕಳಿಗೆ ಸಿಗುವ ಸಂದೇಶ ಇದು: ಹಿರಿಯರಿಗೆ ಒಪ್ಪಿಗೆಯಾದ ಕೆಲಸ 'ಸರಿ'; ಒಪ್ಪಿಗೆಯಾಗದ ಕೆಲಸ 'ತಪ್ಪು'. ಆದರೆ ಈ ಮಕ್ಕಳು ಸರಿ-ತಪ್ಪುಗಳ ನಡುವೆ ವ್ಯತ್ಯಾಸ ಕಂಡು ಹಿಡಿಯುವುದಾದರೂ ಹೇಗೆ? ಈ ಬಗೆಯ ದಂದ್ವ ಭಾವನೆ ಮೂಡಿದಾಗ ಬಣ್ಣ ಹಚ್ಚುವ ಕೆಲಸವೂ 'ಅರ್ಥವಾಗುವುದಿಲ್ಲ' ಎಂಬ ಸ್ಥಿತಿಗೆ ಬಂದು ನಿಂತುಬಿಡುತ್ತದೆ.

ದೊಡ್ಡವರನ್ನು ಕೇಳಿ ಕೇಳಿ ಮಾಡುವಾಗ ಸಿಕ್ಕುವ ಮನ್ನಣೆ ತಾನೇ ನಿರ್ಧಾರ ತೆಗೆದುಕೊಂಡು ಮಾಡುವುದರಿಂದ ಸಾಧ್ಯವಾಗದಿರಬಹುದು. ದೊಡ್ಡವರ ಸಹಮತಗಳಿಸುವ ಸಲುವಾಗಿಯಾದರೂ ಅವರನ್ನು ಕೇಳಿ ಮಾಡಿಬಿಟ್ಟರೆ ಒಳ್ಳೆಯದಲ್ಲವೆ? ಅಷ್ಟೇ ಅಲ್ಲ, ಕೇಳಿ ಅನುಮತಿಯೊಂದಿಗೆ ಕಾರ್ಯ ನಿರ್ವಹಿಸಿದರೆ ದೊಡ್ಡವರ ಶಹಭಾಶ್‌ಗಿರಿಯ ಲಾಭವೂ ಇದೆ. ಕೇಳದೆ ಮಾಡದೆ ತಪ್ಪು ಮಾಡಿ ಬೈಗಳು ತಿನ್ನುವ ಬಾಲಬಾಲೆಯರೆದುರು ಶಹಭಾಶ್‌ಗಿರಿ ಗಳಿಸಿ ಬಿಗುಮಾನದಿಂದ ಬೀಗಬಹುದು ಕೂಡ! ಇದೆಲ್ಲ ನಾವು ಮಕ್ಕಳ ಮೇಲೆ ಅತಿಯಾಗಿ ಹೇರುವ ನಿಯಂತ್ರಣದ ಪರಿಣಾಮ.

ಈ ಬಗೆಯ ಅತಿಯಾದ ನಿಯಂತ್ರಣದಿಂದ ಮಗು ಎಳೆ ವಯಸ್ಸಿನಲ್ಲೆ ತನ್ನ ಸ್ವಂತಿಕೆಯನ್ನು ಬದಿಗಿಟ್ಟು ಯಾವುದರಿಂದ ಮನ್ನಣೆ ಸಿಗುತ್ತದೆಯೋ ಅದನ್ನು ಮಾಡಲು ಪ್ರಾರಂಭಿಸುತ್ತದೆ. ಹೀಗೆ ಹಲವಾರು ವರ್ಷಗಳ ಅಭ್ಯಾಸದಿಂದ ತನ್ನ 'ಸ್ವಂತಿಕೆ' ಎಂಬುದನ್ನು ಮಗು ಪೂರ್ಣವಾಗಿ ಕಳೆದುಕೊಳ್ಳುತ್ತದೆ. ತಾನು ಏನನ್ನಾದರೂ ಸ್ವತಂತ್ರವಾಗಿ ಸಾಧಿಸಬಲ್ಲೆ ಎಂಬ ಆತ್ಮವಿಶ್ವಾಸದ ವ್ಯಕ್ತಿಚಿತ್ರ ಮೂಡುವುದೇ ಇಲ್ಲ.

ತನಗೆ ಅರ್ಥವಾದರೂ ಅರ್ಥವಾಗಲಿಲ್ಲ ಎಂದು ಮೊದಲೇ ತಪ್ಪೊಪ್ಪಿಕೊಂಡು ಬಿಟ್ಟರೆ ಯಾವ ರಗಳೆಯೂ ಇರುವುದಿಲ್ಲ. ವಂದನಾ ತನಗೆ ಇಷ್ಟವಾದ ಬಣ್ಣ ಹಚ್ಚಿ ಖುಷಿ ಪಡಬಹುದಿತ್ತು. ಆದರೆ ಆತಂಕದ ದನಿಯಲ್ಲಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುತ್ತಿದ್ದಾಳೆ. ಅವಳ ಅನುಭವದಲ್ಲಿ ಮಾಡಿದ ಪ್ರತಿ ತಪ್ಪಿಗೂ ಶಿಕ್ಷೆ ಸಿಕ್ಕಿರಬಹುದು; ಅಥವಾ ತಪ್ಪಾದರೂ ಚಿಂತೆಯಿಲ್ಲ, ನಿನಗೆ ಇಷ್ಟವಾದುದನ್ನು ಮಾಡು ಎಂದು ಹುರಿದುಂಬಿಸುವ ವ್ಯಕ್ತಿಗಳು ಅವಳ ಅನುಭವಕ್ಕೆ ಬರದೆ ಇರಬಹುದು. ಅಥವಾ

ಇವಳಿಗೆ ಅನುಭವ ನೀಡುತ್ತಿರುವ ವಾತಾವರಣದಲ್ಲಿ ಸ್ವಂತಿಕೆ ಕಳೆದುಕೊಂಡ, ಮುನ್ನೆಚ್ಚರಿಕೆ ಕ್ರಮಗಳ ಮೂಲಕ ದೊಡ್ಡವರ ಮನ್ನಣೆ ಪಡೆಯುತ್ತಿರುವ ಇತರ ಮಕ್ಕಳು ಆದರ್ಶಪ್ರಾಯವಾಗಿರಬಹುದು.

ಮಕ್ಕಳು ನಮಗಿಂತ ಭಿನ್ನವಾಗಿರಬಲ್ಲರು; ಅವರಿಗೆ ಅವರದೇ ಆದ ಅಭಿಪ್ರಾಯಗಳಿರಲು ಸಾಧ್ಯ. ಮತ್ತು ಸ್ವಂತ ಅಭಿಪ್ರಾಯ ಹೊಂದಲು ಅವರಿಗೆ ಸ್ವಾತಂತ್ರ್ಯವಿದೆ ಎಂಬ ಅಂಶವನ್ನು ನಾವು ಗೌರವಿಸಬೇಕು. ಮಗು ಏನೇ ಆದರೂ 'ನನ್ನ' ಎರಡನೇ ದರ್ಜೆಯ ನಕಲಾಗಬೇಕೆಂದು ಅಧ್ಯಾಪಕರು(ಹಿರಿಯರು) ಭಾವಿಸುತ್ತಾರೆ. ಅವರ ಸ್ವತಂತ್ರ ನಿಲುವುಗಳನ್ನು ನಾವು ಗೌರವಿಸದೆ ಅದು ನನ್ನ ನಿಲುವಿಗಿಂತ ಬೇರೆಯಾದರೆ ಖಂಡಿತ ತಪ್ಪು ಎಂಬ ತೀರ್ಮಾನಕ್ಕೆ ಬಂದುಬಿಡುತ್ತೇವೆ.

ಸೃಜನಶೀಲತೆಯ ಬಗ್ಗೆ ನೂರಾರು ಲೇಖನಗಳನ್ನು ಓದುವುದಕ್ಕಿಂತ, ಅದರ ಬಗ್ಗೆ ಬಿಸಿಬಿಸಿ ಚರ್ಚೆಗಳನ್ನು ಮಾಡುವುದಕ್ಕಿಂತ ಮಗುವಿನ ಸ್ವತಂತ್ರ ನಿಲುವುಗಳನ್ನು (ಅವು ಸರಿ ಇರಲಿ ಅಥವಾ ತಪ್ಪಿರಲಿ) ಗೌರವಿಸುವಷ್ಟು ಮುಕ್ತ ಮನಸ್ಸನ್ನು ನಾವು ಸಂಪಾದಿಸಿದರೆ ಸಾಕು, ನಮ್ಮ ಶಾಲೆಯ ಮಕ್ಕಳೆಲ್ಲ ಅದ್ಭುತ ಸೃಜನಶೀಲತೆಯನ್ನು ಪಡೆದುಬಿಡುತ್ತಾರೆ.

ಹಾಗಾದರೆ ಮಗು ನಂಬುವ ಭಾವಿಸುವ ಎಲ್ಲ ತಪ್ಪು ಕಲ್ಪನೆಗಳನ್ನೂ ಅಧ್ಯಾಪಕರು ಸರಿ ಎಂದು ಒಪ್ಪಿಕೊಂಡುಬಿಟ್ಟರೆ ಮಗುವಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೆ ಎಂಬ ಪ್ರಶ್ನೆ ಏಳುತ್ತದೆ. ಇದೊಂದು ಮುಖ್ಯವಾದ ಪ್ರಶ್ನೆಯೇ ಸರಿ. ಇಲ್ಲಿ ನಾವು ಒಪ್ಪಬೇಕಾಗಿರುವುದು ಅಭಿಪ್ರಾಯವನ್ನಲ್ಲ. ಮಗುವಿನ ನಿಲುವಿಗೆ ಗೌರವಕೊಟ್ಟು ತನ್ಮೂಲಕ ಅದರ ಆತ್ಮವಿಶ್ವಾಸವನ್ನು ಬೆಂಬಲಿಸುವ ನಡೆನುಡಿಯನ್ನು ನಾವು ರೂಢಿಸಿಕೊಳ್ಳುವುದು ಬಹು ಮುಖ್ಯ. ಮಗುವಿನ ತಪ್ಪು ಅಭಿಪ್ರಾಯವನ್ನು ಏಕಾಏಕಿ ಖಂಡಿಸದೆ ಅದರ ಆತ್ಮಗೌರವಕ್ಕೆ ಧಕ್ಕೆ ಬರದಂತೆ ಮುಕ್ತವಾಗಿ ವಿಷಯವನ್ನು ಬಿಡಿಸುತ್ತಾ ಹೋಗಬಹುದು. ಆಗ ಈ ಪ್ರಕ್ರಿಯೆ ಅಹಂಕಾರಕ್ಕೆ ಸಂಬಂಧಪಡುವುದಿಲ್ಲ; ಈ ಪ್ರಕ್ರಿಯೆ ಒಂದು ವಸ್ತುನಿಷ್ಠ ವಿಶ್ಲೇಷಣೆಗೆ ಸಂಬಂಧಪಟ್ಟಿದ್ದು ಎಂದು ಮಗುವಿಗೆ ವೇದ್ಯವಾಗುತ್ತಾ ಹೋಗುತ್ತದೆ. ಅಹಂಕಾರವೇ ಪ್ರಧಾನವಾದಾಗ ಸೋಲು-ಗೆಲುವಿನ ಪ್ರಶ್ನೆ ಅನಿವಾರ್ಯವಾಗಿ ಎದುರುನಿಲ್ಲುತ್ತದೆ. ಗುರು-ಶಿಷ್ಯರ ನಡುವಿನ ಕಲಿಕಾ ಪ್ರಕ್ರಿಯೆ ಅನ್ವೇಷಣಾ ಪಯಣದಂತಾದರೆ ಚಾರಣಕ್ಕೆ ಹೋದಷ್ಟು ಉಲ್ಲಾಸ, ಉತ್ಸಾಹ, ಸಾಹಸಗಳು ಮೇಳೈಸುತ್ತವೆ. ಈ ತರ್ಕ ಪಯಣದುದ್ದಕ್ಕೂ ಮೈನವಿರೇಳಿಸುವ ಹೊಸ ವಿಷಯಗಳು, ಅದ್ಭುತಗಳು ಮಗುವಿನ ಕಲ್ಪನೆಗಳಿಗೆ ಹೊಸ ಹೊಸ ಗರಿಗಳನ್ನು ನೀಡುತ್ತವೆ. ಚಿಂತನೆಗಳು ಅಹಂಕಾರರಹಿತವಾಗಿ ಪರಸ್ಪರ ಪೂರಕವಾದಾಗ 'ತನ್ನ ನಿಲುವು' 'ಅವನ ನಿಲುವು' ಎಂಬ ಭೇದಗಳಳಿಯುತ್ತವೆ. ಮಗುವಿಗೆ ಅಥವಾ ವಿದ್ಯಾರ್ಥಿಗೆ ಅಧ್ಯಾಪಕನ ಮೇಲೆ ಮೆಚ್ಚುಗೆ, ಗೌರವ, ಜೊತೆಗೆ ಪ್ರೀತಿ ಸಲುಗೆಗಳೂ ಮೂಡುತ್ತವೆ.

ನಮ್ಮ ಶಾಲಾ ಕಲಿಕೆಯಿಂದ ನಾವು ನಿರೀಕ್ಷಿಸಬೇಕಾದ್ದು ಇದನ್ನು. ಆಗ ಬಣ್ಣ ಹಚ್ಚುವುದು ಒಂದು ಸಮಸ್ಯೆಯಾಗುವುದಿಲ್ಲ. ಅಷ್ಟೇ ಏಕೆ $E=MC^2$ ಕೂಡ ಸಮಸ್ಯೆಯಾಗುವುದಿಲ್ಲ.

ಪಾಕಿಸ್ತಾನದಲ್ಲಿ ಹೀಗೊಂದು ಘಟನೆ

ಪಾಕಿಸ್ತಾನದ ಕರಾಚಿಯಲ್ಲಿರುವ ಅಧ್ಯಾಪಕರ ಸಂಪನ್ಮೂಲ ಕೇಂದ್ರದಲ್ಲಿ 'ಒಬ್ಬ ಪುಟ್ಟ ಹುಡುಗ' (One Little Boy) ಎಂಬ ಕವಿತೆಯನ್ನು ತಮ್ಮಲ್ಲಿಗೆ ಬರುವವರೆಲ್ಲರಿಗೂ ಓದಿ ಹೇಳುತ್ತಾರೆ. ಈ ಪದ್ಯವನ್ನು ಕೇಳಿಸಿಕೊಂಡವರು ಕವಿತೆಯ ಪರಿಣಾಮದಿಂದ ಹೊರಬರಲು ಕೆಲವು ನಿಮಿಷಗಳನ್ನೇ ತೆಗೆದುಕೊಳ್ಳುತ್ತಾರಂತೆ. ಈ ಕವಿತೆಯ ಸಂಕ್ಷಿಪ್ತ ಸಾರಾಂಶ ಹೀಗಿದೆ.

ಒಮ್ಮೆ ಒಬ್ಬ ಚಿಕ್ಕ ಹುಡುಗ ಶಾಲೆಗೆ ಹೋದ.
ದೊಡ್ಡದಾದ ಶಾಲೆ, ಪಾಪ ಹುಡುಗ ಬಹಳ ಚಿಕ್ಕವನು.
ತರಗತಿಯಲ್ಲಿ ಹೋಗಿ ಕುಳಿತಮೇಲೆ ಶಾಲೆ ಅಷ್ಟು ದೊಡ್ಡದಾಗಿ ಕಾಣಲಿಲ್ಲ.
ಅವನಿಗೆ ಸಂತೋಷವಾಯಿತು.
ಒಂದು ದಿನ ಬೆಳಿಗ್ಗೆ ಮಿಸ್ ಹೇಳಿದರು:
'ಮಕ್ಕಳೇ ಇಂದು ನಾವು ಬಣ್ಣ ಬಣ್ಣದ ಚಿತ್ರ ಬರೆಯೋಣ'.
ಹುಡುಗನಿಗೆ ಆನಂದವೋ ಆನಂದ.
ತಾನು ತಂದ ಬಣ್ಣದ ಕ್ರೆಯಾನ್‌ಗಳನ್ನು ನೆಲದ ಮೇಲೆ ಹರಡಿದ.
ಬಿಳಿ ಹಾಳೆಯನ್ನು ತೆಗೆದು ಹರಡಿದ, ಜೊತೆಗೆ ಹುಲಿ ಸಿಂಹ
ಹಸು ಕೋಳಿಮರಿ ದೋಣಿ ಹಾಯಿ ಹಡಗು
ಹೀಗೆ ಏನೆಲ್ಲ ಚಿತ್ರಗಳು ಮನದ ಹಾಳೆಯ ಮೇಲೆ ಜೀವಂತವಾಗಿ ಹಾರಾಡಿದವು.
ಹುಡುಗ ಇನ್ನೇನು ಬರೆಯಬೇಕೆಂದಿದ್ದ,
ಶಾಲೆಯ ಮೂಲೆಯಿಂದ ಗುದ್ದಿದಂತೆ ಎದ್ದಿತು ಆದೇಶ –
'ಒಂದು ನಿಮಿಷ ತಡೆಯಿರಿ, ನಾನು ಹೇಳುವವರೆಗೂ ಬರೆಯಬೇಡಿ'
ಮತ್ತೆ ಮಿಸ್ ಹೇಳಿದರು 'ಮಕ್ಕಳೇ ನಾವೆಲ್ಲ ಹೂವಿನ ಚಿತ್ರ ಬರೆಯೋಣ'.
'ಹೌದಲ್ಲ', ಬಾಲಕ ಭಾವಿಸಿಕೊಂಡ, ಒಂದು ಸುಂದರವಾದ ಹೂವು'.
ಬರೆಯಲು ಶುರು ಮಾಡಿಯೇ ಬಿಟ್ಟ
ನಸುಗುಲಾಬಿಯ, ಕಿತ್ತಳೆ ಬಣ್ಣದ, ನೀಲಿ ಬಣ್ಣದ, ಹೀಗೆ ಬಣ್ಣ ಬಣ್ಣದ

ಹೂಗಳನ್ನು ಬರೆದೇಬಿಟ್ಟ.
ಮತ್ತೆ ಅದೇ ಧ್ವನಿ
ಮಿಸ್ ಹೇಳಿದರು – 'ಅವಸರ ಮಾಡಬೇಡಿ, ಸ್ವಲ್ಪ ತಾಳಿ,
ಹೇಗೆ ಬರೆಯಬೇಕೆಂದು ನಾ ಹೇಳಿಕೊಡುತ್ತೇನೆ'.
'ಮಕ್ಕಳೇ, ಇಲ್ಲಿ ನೋಡಿ, ಕೆಂಪು ಗುಲಾಬಿಗೆ ಹಸಿರು ಬಣ್ಣದ ತೊಟ್ಟು ಇರಬೇಕು, ಹೀಗೆ'.
ಬಾಲಕ ತಾನು ಬರೆದ ಚಿತ್ರ ನೋಡಿದ; ಅದು ಚೆನ್ನಾಗಿಯೇ ಇದೆ ಅನಿಸಿತು ಅವನಿಗೆ.
ಆದರೆ ಹಾಗೇನೂ ಅವನು ಹೇಳುವ ಗೋಜಿಗೆ ಹೋಗಲಿಲ್ಲ.
ಹಾಳೆ ತಿರುವಿ ಹಾಕಿ ಮಿಸ್ ತೋರಿಸಿಕೊಟ್ಟಂತೆ ಚಿತ್ರ ಬರೆದ–
ಕರ್ತವ್ಯ ದೃಷ್ಟಿಯಿಂದ.
ಮತ್ತೊಂದು ದಿನ ತರಗತಿಯಲ್ಲಿ ಮಿಸ್ ಹೇಳಿದರು–
'ಮಕ್ಕಳೇ, ಇಂದು ಮಣ್ಣಿನಲ್ಲಿ ನಾವು ಆಟ ಆಡೋಣ, ಏನಾದರೂ ಮಾಡೋಣ'.
ಈ ಪುಟ್ಟ ಹುಡುಗನಿಗೆ ಖುಷಿಯೋ ಖುಷಿ.
ಇದಕ್ಕಿಂತ ಅದ್ಭುತವಾದದ್ದು ಏನು ತಾನೆ ಇದೆ?
ಹಾವು ಮಾಡಬಹುದು, ಆನೆ ಮಾಡಬಹುದು, ಇಲಿ ಮಾಡಬಹುದು,
ಕಾರು ಬಸ್ಸುಗಳನ್ನು ಮಾಡಬಹುದೆಂದು ಭಾವಿಸುತ್ತಿದ್ದ.
ಆದರೆ ಅದೇ ಧ್ವನಿ
ಮಿಸ್ ಹೇಳಿದರು – 'ಮಕ್ಕಳೇ, ಸ್ವಲ್ಪ ತಡೆಯಿರಿ, ಇಂದು ನಾವು ಮಣ್ಣಿನಿಂದ ಪಾತ್ರೆ ಮಾಡೋಣ'.
ಬಾಲಕ ಭಾವಿಸಿದ– 'ಹೌದಲ್ಲ, ನಾನು ನಮ್ಮ ಮನೆಯಲ್ಲಿರುವ ಆ ಬೋಗಣಿ – ಅದನ್ನು ಮಾಡುತ್ತೇನೆ,
ಚಮಚ ಮಾಡುತ್ತೇನೆ, ಹೂಜಿ ಮಾಡುತ್ತೇನೆ'
ಬೇಗಬೇಗನೆ ಮಾಡಿಯೇ ಬಿಟ್ಟ
ಆದರೆ ಅದೇ ಧ್ವನಿ
'ತಡೆಯಿರಿ, ಪಾತ್ರೆ ಹೇಗೆ ಮಾಡಬೇಕೆಂದು ನಾನು ಮಾಡಿತೋರಿಸುತ್ತೇನೆ'.
ಮಿಸ್ ಉದ್ದನಾದ ಒಂದು ಕೊಳಗದಂತಹ ಪಾತ್ರೆ ಮಾಡಿತೋರಿಸಿದರು.
ಬಾಲಕ ತಾನು ಮಾಡಿದ್ದ ಪಾತ್ರೆಯನ್ನೂ ಮಿಸ್ ಮಾಡಿದ್ದ ಪಾತ್ರೆಯನ್ನೂ ನೋಡಿದ.

ಅವನಿಗೆ ತಾನು ಮಾಡಿದ ಪಾತ್ರೆ ಇಷ್ಟವಾಯಿತು.
ಆದರೆ ಅದನ್ನು ಮಿಸ್‌ಗೆ ಹೇಳಲಿಲ್ಲ;
ಮಿಸ್ ಮಾಡಿ ತೋರಿಸಿದ ಪಾತ್ರೆಯನ್ನೇ ಮಾಡಿದ.
ಹೀಗೆ
ಈ ಪುಟ್ಟ ಹುಡುಗ ಕಾಯುವುದನ್ನು, ಮಿಸ್ ಮಾಡಿದ್ದನ್ನೇ ನೋಡುವುದನ್ನು,
ನೋಡಿಕೊಂಡೇ ಮಾಡುವುದನ್ನು ಕಲಿತುಕೊಂಡ.
ಜೊತೆಗೆ ಸ್ವಂತ ನಿರ್ಧಾರಗಳ ಗೊಡವೆ ಬೇಡೆಂದು ಕೈಬಿಟ್ಟ.
ಹೀಗಿರುವಾಗ ಬಾಲಕನ ತಂದೆತಾಯಿಗಳು ಮತ್ತೊಂದು ಊರಿಗೆ ವರ್ಗವಾಗಿ ಹೋದರು.
ಅಲ್ಲಿಯೂ ಈ ಪುಟ್ಟ ಹುಡುಗ ದೊಡ್ಡದೊಂದು ಶಾಲೆಗೆ ಸೇರಿದ.
ಆ ಶಾಲೆಯಲ್ಲಿ ಒಂದು ದಿನ ಮಿಸ್ ಹೇಳಿದರು –
'ಮಕ್ಕಳೇ, ನಾವು ಇಂದು ಬಣ್ಣದ ಚಿತ್ರ ಬಿಡಿಸೋಣ'.
ಬಾಲಕನಿಗೆ ಸಂತೋಷವಾಯಿತು.
ಬಣ್ಣದ ಕ್ರೆಯಾನ್‌ಗಳನ್ನು ತೆರೆದ ಬಿಳಿ ಹಾಳೆಗಳನ್ನು ಹರಡಿದ;
ಮಿಸ್ ಹೇಳುವುದನ್ನು ಕೇಳಲು ಕಾಯುತ್ತಿದ್ದ.
ಆದರೆ ಮಿಸ್ ಏನನ್ನು ಹೇಳಲಿಲ್ಲ.
ಮೌನವಾಗಿ ಕೊಠಡಿಯುದ್ದಕ್ಕೂ ನಡೆದಾಡುತ್ತಿದ್ದರು.
ನಮ್ಮ ಪುಟ್ಟ ಬಾಲಕನ ಬಳಿ ಬಂದು ಕೇಳಿದರು –
'ಮಗು, ನೀನು ಚಿತ್ರ ಬಿಡಿಸುವುದಿಲ್ಲವೆ?'
'ಏನು ಚಿತ್ರ ಬಿಡಿಸಲಿ'?
'ಯಾವ ಚಿತ್ರವನ್ನು ಬೇಕಾದರೂ ಸರಿ, ನಿನಗಿಷ್ಟವಾದ ಚಿತ್ರ'.
'ಹೇಗೆ ಚಿತ್ರ ಬಿಡಿಸಲಿ'?
'ನಿನಗೆ ಇಷ್ಟ ಬಂದ ಚಿತ್ರ ಬಿಡಿಸು'
'ಯಾವ ಬಣ್ಣ ಹಚ್ಚಲಿ?
'ನಿನಗಿಷ್ಟ ಬಂದ ಬಣ್ಣ ಹಚ್ಚು'.
'ನನಗಂತೂ ಅರ್ಥವಾಗುತ್ತಲೇ ಇಲ್ಲ' ಎಂದು ಹೇಳುತ್ತ ಬಾಲಕ ಯೋಚಿಸಿದ;
ಅವನಿಗೆ ತಕ್ಷಣ ನೆನಪು ಬಂತು:
ಅವನೊಂದು ಚಿತ್ರ ಬರೆದ – "ಕೆಂಪು ಬಣ್ಣದ ಗುಲಾಬಿ ಹಸಿರು ತೊಟ್ಟು"

ವಂದನಾಳ ಬಗ್ಗೆ ನಡೆದ ಸತ್ಯ ಘಟನೆ, ಆ ಸಂಬಂಧವಾದ ವಿಚಾರಸರಣಿಯನ್ನು 'ಟೀಚರ್' ಪತ್ರಿಕೆಯಲ್ಲಿ ನಾನು ಪ್ರಕಟಿಸಿ ವರ್ಷಗಳೇ ಕಳೆದಿತ್ತು. ಆಗ ನನಗೆ ಈ ಪಾಕಿಸ್ತಾನದ ಕರಾಚಿ ಅಧ್ಯಾಪಕರ ಸಂಪರ್ನ್ಮೂಲದ ಕವಿತೆ ಓದಲು ಸಿಕ್ಕಿತು. ಈ ಎರಡರ ನಡುವೆ ಇರುವ ಸಾಮ್ಯದಿಂದಲೇ ನಾವು ನಮ್ಮ ದೇಶದಾದ್ಯಂತ ಅಥವಾ ಭಾರತ ಉಪಖಂಡದಾದ್ಯಂತ ತರಗತಿಗಳ ಸರಾಸರಿ ಸ್ವರೂಪವನ್ನು ಊಹಿಸಬಹುದು.

ಪಠ್ಯ ಪುಸ್ತಕಗಳು ಮತ್ತು ಶಿಶುಕೇಂದ್ರಿತ ಶಿಕ್ಷಣ

ನೆದರ್‌ಲ್ಯಾಂಡ್ ದೇಶದ ಶಿಕ್ಷಕರ ಮಾರ್ಗದರ್ಶಿ ಯೋಕ್ ಎಂಬ ಮಹಿಳೆ ನಮ್ಮ ಶಾಲೆಗೆ ಸ್ವಯಂಸೇವಕಿಯಾಗಿ ಬಂದಿದ್ದ. ನೆದರ್‌ಲ್ಯಾಂಡ್‌ನಲ್ಲಿ ಇವರು ಶಿಕ್ಷಕರ ಸಲಹೆಗಾರರಾಗಿ (Teacher Counselor) ಕೆಲಸ ಮಾಡುತ್ತಾರೆ. ಇವರು ತಮಗೆ ನಿಗದಿಯಾಗಿರುವಷ್ಟು ಜನ ಅಧ್ಯಾಪಕರ ತರಗತಿಗಳನ್ನು ವೀಕ್ಷಿಸಿ ಅವರಿಗೆ ಸಲಹೆ ಸೂಚನೆಗಳನ್ನು ನೀಡುತ್ತಾರೆ. ಈಕೆ ನಮ್ಮ ಶಾಲೆಯ ತರಗತಿಗಳನ್ನು ಮುಖ್ಯವಾಗಿ – ಗಣಿತ, ಇಂಗ್ಲೀಷ್ ತರಗತಿಗಳನ್ನು ವೀಕ್ಷಿಸಿದರು. ಅನಂತರ ಪೂರ್ವ ಸಿದ್ಧತೆಯಿಲ್ಲದೆ ಗಣಿತದ ಅಧ್ಯಾಪಕನೊಬ್ಬ ತರಗತಿಗೆ ಹೋಗಿ ದಾರ, ಸೂಜಿ, ಮಣಿಗಳು ಎಂದು ಪರದಾಡಿದ ರೀತಿಯನ್ನು ತಮಾಷೆಯಾಗಿ ನಮ್ಮ ಎಲ್ಲ ಅಧ್ಯಾಪಕರ ಎದುರು ಅಭಿನಯಿಸಿ ನಮ್ಮನ್ನೆಲ್ಲ ನಗೆಗಡಲಲ್ಲಿ ತೇಲಿಬಿಟ್ಟಳು. ಆ ಗಣಿತದ ಅಧ್ಯಾಪಕನಂತೂ ಹೊರಗೆ ನಗುತ್ತಿದ್ದರೂ ಒಳಗೇ ಬಹಳ ಪೇಚಾಡಿಕೊಂಡಂತೆ ಕಾಣುತ್ತಿದ್ದ. ಪೂರ್ವಸಿದ್ಧತೆ ಮಾಡಿಕೊಳ್ಳದೆ, ಎಂದರೆ ಚಟುವಟಿಕೆಗಳನ್ನು ಕೈಗೊಳ್ಳಲು ಬೇಕಾಗುವ ವಸ್ತುಗಳನ್ನು ತೆಗೆದುಕೊಳ್ಳದೆ, ತರಗತಿಗೆ ಯಾರೂ ಹೋಗಬಾರದು ಎಂದು ಬಹುಶಃ ನಮ್ಮ ಎಲ್ಲ ಅಧ್ಯಾಪಕರು ನಿರ್ಧರಿಸಿದರು ಎಂದು ಕಾಣುತ್ತದೆ.

ಯೋಕ್ ಹೇಳಿದ ಮತ್ತೊಂದು ವಿಷಯ ನಮ್ಮ ಅಧ್ಯಾಪಕರಿಗೆಲ್ಲ ಅಚ್ಚರಿ ಮೂಡಿಸಿತು. ನಮ್ಮ ಪಠ್ಯಪುಸ್ತಕಗಳನ್ನು ಕಂಡು ಹೇಳಿದಳು: 'This is too much of spoon feeding'. ಆಕೆಯ ಪ್ರಕಾರ ಪಠ್ಯಪುಸ್ತಕಗಳ ಅಗತ್ಯವೇ ಇಲ್ಲ. ಅಧ್ಯಾಪಕನಾದವನಿಗೆ ನಿಗದಿತವಾದ ಪಠ್ಯಕ್ರಮದ ವ್ಯಾಪ್ತಿ ಏನು ಎಂದು ತಿಳಿದಿರುತ್ತದೆ. ಎಂದರೆ ಆಯಾ ತರಗತಿಯ ಆಯಾ ವಯಸ್ಸಿನ ಮಕ್ಕಳು ಪಠ್ಯಕ್ರಮದ ಆಧಾರದ ಮೇಲೆ ಏನನ್ನು ಗ್ರಹಿಸಬೇಕು, ಏನನ್ನು ಅರಿಯಬೇಕು ಎಂಬ ಬಗ್ಗೆ ಸ್ಪಷ್ಟ ತಿಳುವಳಿಕೆ ಇರುತ್ತದೆ. ಹಾಗಾಗಿ ತಮಗೆ ಬೇಕಾದ ಪಠ್ಯವನ್ನು ಅಧ್ಯಾಪಕರು ತಾವೇ ಸ್ವಯಂ ತಯಾರಿಸಿಕೊಳ್ಳಬೇಕು. ಏಕರೂಪದ ಪಠ್ಯಪುಸ್ತಕಗಳು ತರಗತಿಯ ಸಾಧ್ಯತೆಗಳನ್ನು ಮೊಟಕುಗೊಳಿಸುತ್ತವೆ ಎಂಬುದು ಆಕೆಯ ಅಭಿಪ್ರಾಯ. ನೆದರ್‌ಲ್ಯಾಂಡ್ ದೇಶದ ಅಧ್ಯಾಪಕರು ಪಠ್ಯಪುಸ್ತಕಗಳ ನೆರವಿಲ್ಲದೆ ತರಗತಿಗಳನ್ನು ನಡೆಸುತ್ತಾರೆಂದು ಯೋಕ್ ನಮಗೆ ಹೇಳಿದಳು. ಅವರು ಕೆಲವು ರೆಫರೆನ್ಸ್ ಪುಸ್ತಕಗಳನ್ನು ಬಳಸಿ ತಮಗೆ ಬೇಕಾದ ಪಠ್ಯವನ್ನು ತಾವೇ

ತಯಾರಿಸಿಕೊಳ್ಳುತ್ತಾರಂತೆ. ಹೀಗೆ ಮಾಡಬೇಕಾದರೆ ಅಧ್ಯಾಪಕನಾದವನು ಆಳವಾಗಿ ಅಭ್ಯಾಸಮಾಡಿ, ವಿಷಯವನ್ನು ತಾನೇ ಗ್ರಹಿಸಿ ಮಕ್ಕಳ ಅಭಿರುಚಿಗೆ ತಕ್ಕಂತೆ ತನ್ನ ಪಠ್ಯವನ್ನು ತಾನೇ ತಯಾರಿಸುತ್ತಾನೆ. ಇಂತಹ ತರಗತಿಗಳಲ್ಲಿ ಮಗು ಒಂದು ವಿಷಯವನ್ನು ಗ್ರಹಿಸಲು ಹಲವಾರು ಪರ್ಯಾಯ ಪಠ್ಯಗಳನ್ನು ತಯಾರು ಮಾಡಬಹುದು. ಜೊತೆಗೆ ಚಟುವಟಿಕೆಗಳ ಮೂಲಕ ಮಗುವಿಗೆ ಅರ್ಥ ಮಾಡಿಸಲು ಪ್ರಯತ್ನಿಸಬಹುದು. ಮಗುವಿನ ಪೂರ್ವಜ್ಞಾನವನ್ನು ಆಧಾರವಾಗಿಟ್ಟುಕೊಂಡು ಪಠ್ಯ ತಯಾರಾದರೆ, ಚಟುವಟಿಕೆಗಳು ರೂಪುಗೊಂಡರೆ ಮಗು ಹೊಸದನ್ನು ಗ್ರಹಿಸಲು ಸಾಧ್ಯವಾಗುತ್ತದೆ. ಒಟ್ಟಿನಲ್ಲಿ ಮಗುವಿನ ಅಭಿರುಚಿ, ಗ್ರಹಣಶಕ್ತಿಗನುಗುಣವಾಗಿ ಅನೇಕ ಪರ್ಯಾಯ ಪಠ್ಯಗಳು ಸಾಧ್ಯ. ಇಂತಹ ತರಗತಿಯ ವಾತಾವರಣದಲ್ಲಿ ಕಲಿಕಾ ಭಿನ್ನತೆಯನ್ನು ಸಮರ್ಥವಾಗಿ ನಿರ್ವಹಿಸಬಹುದು. ನಿಧಾನ ಕಲಿಕೆಯ ಮಕ್ಕಳು ನಿರ್ಲಕ್ಷ್ಯಕ್ಕೆ ಗುರಿಯಾಗುವುದಿಲ್ಲ. ಅಥವಾ ಜಾಣ ಮಕ್ಕಳು ಮಾತ್ರ ಕಲಿತು ಮುನ್ನಡೆದು ಅನೇಕರು ಹಿಂದುಳಿಯುವುದಿಲ್ಲ. ಅಥವಾ ಸಾಮರ್ಥ್ಯ ಹೆಚ್ಚಾಗಿರುವ ಮಕ್ಕಳಿಗೆ ಬೇಸರವಾಗದಂತೆ ಹೆಚ್ಚಿನ ಸಾಮರ್ಥ್ಯದೆಡೆಗೆ ಮುಂದುವರೆಯಲು ಅವಕಾಶವಿರುತ್ತದೆ. ಈ ಪ್ರಕ್ರಿಯೆಯಲ್ಲಿ ಹಿಂದುಳಿದ ಇತರ ಮಕ್ಕಳಿಗೆ ತೇಜೋವಧೆ ಆಗದಂತೆ ಅಧ್ಯಾಪಕನಾದವನು ಸುಲಭ ಕ್ರಮಗಳನ್ನು ಅನುಸರಿಸಬಹುದು.

ಈ ಸಂದರ್ಭದಲ್ಲಿ ಗಮನಿಸಬೇಕಾದ ಎರಡು ಅಂಶಗಳೆಂದರೆ, ಒಂದು – ಅಧ್ಯಾಪಕನಾದವನು ಸೃಜನಶೀಲನಾಗಿರುವ ಮೂಲಕ ಮಕ್ಕಳ ಬೇರೆಬೇರೆ ಸುಪ್ತ ಸಾಮರ್ಥ್ಯಗಳು ವಿಕಾಸವಾಗುವಂತೆ ಶ್ರಮಿಸುತ್ತಾನೆ ಎನ್ನುವುದು. ಎರಡನೆಯದು, ಶಿಶುಕೇಂದ್ರಿತ ಶಿಕ್ಷಣದ ಆಶಯ. ಹೀಗೆ ಮಗುವಿಗೆ ಅನುಗುಣವಾಗಿ ಪಠ್ಯ ತಯಾರಿಸುವ ಪ್ರಯತ್ನದ ಹಿಂದೆ ಮಗುವನ್ನು ಪುಸ್ತಕಕ್ಕಿಂತ ಗಂಭೀರವಾಗಿ ಪರಿಗಣಿಸುವ ವಿಶಾಲ ದೃಷ್ಟಿಯಿದೆ. ಮಗು ತರಗತಿಯ ಕೇಂದ್ರಬಿಂದುವಾಗಿ ಅದಕ್ಕೆ ಸಿಗಬೇಕಾದ ಸಕಲ ಆದ್ಯತೆಗಳು ದೊರೆಯಬೇಕೆಂಬ ಆಶಯವಿದೆ.

ಆದರೆ ನಮ್ಮಲ್ಲಿ ಏಕರೂಪದ ಪಠ್ಯಪುಸ್ತಕಗಳು ಉಪಯೋಗದಲ್ಲಿವೆಯಲ್ಲ? ನಾವೇನು ಮಾಡಬೇಕು? ಈ ಪ್ರಶ್ನೆಗೆ ಸುಲಭವಾದ ಉತ್ತರ ಇದೆ. ಈಗಿನ ಪಠ್ಯಪುಸ್ತಕಗಳು ಹಿಂದೆ ಇದ್ದ ಪಠ್ಯಪುಸ್ತಕಗಳಿಗಿಂತ ಉತ್ತಮವಾಗಿವೆ. ಗಾಂಧೀಜಿಯವರ ಕಾಲದಲ್ಲಿ ಪಠ್ಯಪುಸ್ತಕಗಳು ದಿನನಿತ್ಯದ ಜೀವನಕ್ಕೆ ಎಳ್ಳಷ್ಟೂ ಸಂಬಂಧಪಡುವುದಿಲ್ಲ ಎಂಬ ಕಾರಣಕ್ಕೆ ಗಾಂಧೀಜಿ ಹೇಳುತ್ತಿದ್ದರು: 'ಎಲ್ಲವನ್ನೂ ನನಗೇ ಬಿಟ್ಟರೆ ನಾನು ಎಲ್ಲ ಪಠ್ಯಪುಸ್ತಕಗಳನ್ನು ಸುಟ್ಟುಹಾಕಿಬಿಡುತ್ತಿದ್ದೆ.' ಆದರೆ ಇಂದಿನ ದಿನಗಳಲ್ಲಿ ಸಾಕಷ್ಟು ಪರಿಣತರು ಪ್ರಯತ್ನ ಪಟ್ಟು ಪಠ್ಯಪುಸ್ತಕಗಳನ್ನು ಆದಷ್ಟು ಮಗುವಿಗೆ ಸಮೀಪ ಕೊಂಡೊಯ್ದಿದ್ದಾರೆ. ಆದರೂ ಈ ಯಾವ ಪಠ್ಯಪುಸ್ತಕವೂ ಸೃಜನಶೀಲ ಅಧ್ಯಾಪಕನೊಬ್ಬ ತನ್ನ ತರಗತಿಗೆ ಅನುಗುಣವಾಗಿ ಬಳಸುವಷ್ಟು ವ್ಯಾಪ್ತಿಯನ್ನು ಪಡೆದಿರುವುದಿಲ್ಲ. ಆದ್ದರಿಂದ ಪಠ್ಯಪುಸ್ತಕಗಳಿದ್ದರೂ ಅವನು

ತನ್ನ ತರಗತಿಗನುಗುಣವಾಗಿ ಪೂರಕ ಸಾಮಗ್ರಿಗಳನ್ನು ತಯಾರು ಮಾಡಲೇಬೇಕು. ಇದು ಚಟುವಟಿಕೆಗೆ ಸಂಬಂಧಪಟ್ಟ ವಸ್ತುವಾಗಿರಬಹುದು ಅಥವಾ ಅಗತ್ಯವಾದ ಸಾಹಿತ್ಯವಾಗಿರಬಹುದು ಅಥವಾ ಅಭ್ಯಾಸದ ಹಾಳೆಗಳಾಗಿರಬಹುದು. ತರಗತಿಯಲ್ಲಿ ಮಕ್ಕಳನ್ನು ಗಂಭೀರವಾಗಿ ಪರಿಗಣಿಸುವ ಅಧ್ಯಾಪಕರು ತಮ್ಮ ತರಗತಿಯ ಅಗತ್ಯಗಳನ್ನು ತಾವೇ ಪೂರೈಸಿಕೊಳ್ಳಬಲ್ಲರು.

ಶಿಶುಕೇಂದ್ರಿತ ಶಿಕ್ಷಣದ ಆಶಯದ ಹಿಂದೆ ಒಂದು ಸಮಗ್ರ ಜೀವನದೃಷ್ಟಿ ಇದೆ. ನಾವು ಹಿಂದೆ ಚರ್ಚಿಸಿದ ಅಂಶ – ವಸ್ತುಗಳಿಗಿಂತ ಮನುಷ್ಯನೇ ಮುಖ್ಯ, ಹಣ ಗಳಿಸುವುದಕ್ಕಿಂತ ಮನುಷ್ಯನ ಬದುಕು ಮುಖ್ಯ ಎಂಬ ಅರಿವು– ಈ ಜೀವನದೃಷ್ಟಿಯ ಕೇಂದ್ರವಾಗಿರುತ್ತದೆ. ಹಾಗಾಗಿ ಈ ಶಿಕ್ಷಣ ಜೀವನದ ಸಿದ್ಧತೆಗಳಿಗಿಂತ ಅನುದಿನದ ಜೀವನಕ್ಕೆ ಒತ್ತು ಕೊಡುತ್ತದೆ, ಒತ್ತು ಕೊಡಬೇಕು. ಈ ಜೀವನದೃಷ್ಟಿಯುಳ್ಳ ಅಧ್ಯಾಪಕ ಕೇವಲ ತನ್ನ ಮಾತುಗಳು ಧ್ವನಿಸುವ ಅರ್ಥಕ್ಕಿಂತ ತನ್ನ ಇರುವಿಕೆಯಿಂದಾಗಿಯೇ ಮಗುವಿನ ಮೇಲೆ ಗಾಢ ಪ್ರಭಾವ ಬೀರುತ್ತಾನೆ. 'ಮಾತುಮನಂಗಳಿಂದತ್ತತ್ತ ಮೀರಿದ ಸಾತಿಶಯದ ನಿರ್ಮಲ ನಿರುಪಾಧಿಕ ಜ್ಯೋತಿ' ಬೆಳಗಿಸುತ್ತಾನೆ. ಆಗ ಕತ್ತಲೆಯೆಂಬುದು ಕವಿಯಲಾರದು. ಈ ಅರ್ಥದಲ್ಲಿ ಪ್ರತಿಯೊಬ್ಬ ಅಧ್ಯಾಪಕನೂ ಪಠ್ಯಪುಸ್ತಕದ ಪರಿಮಿತಿಯನ್ನು ಗುರುತಿಸಿ ಪುಸ್ತಕದಾಚೆಯ ಸಾಧ್ಯತೆಯನ್ನು ಕಂಡುಕೊಳ್ಳಬೇಕು.

ಶಿಶುಕೇಂದ್ರಿತ ಶಿಕ್ಷಣ ಮತ್ತು ತರಗತಿಯ ಭಾಷಾ ಮಾಧ್ಯಮ

ಇಂಗ್ಲಿಷ್–ಕನ್ನಡ ಮಾಧ್ಯಮ ಸಂಬಂಧವಾಗಿ ಚರ್ಚೆ ನಡೆದಿತ್ತು. ಭಾಷೆಯ ಕುರಿತಾಗಿ ವಿದ್ವಾಂಸರು ಏನೆನ್ನುತ್ತಾರೆ, ಪ್ರಾಥಮಿಕ ಹಂತದಲ್ಲಿ ಯಾವ ಭಾಷೆಯನ್ನು ಬಳಸಿದರೆ ಮಗುವಿನ ಕಲಿಕೆ ಉತ್ತಮವಾಗುತ್ತದೆ ಎಂಬಿವೇ ವಿಚಾರ ಚರ್ಚೆಗೆ ಗ್ರಾಸವಾಗಿತ್ತು. ಈ ಸಂದರ್ಭದಲ್ಲಿ ನನ್ನ ಮಿತ್ರ ಶಿವಾನಂದ ಹೊಂಬಳ ಅವರು ಕೇಳಿದರು: 'ಅದೆಲ್ಲ ಸರಿ, ಆದರೆ ಮಗುವಿಗೆ ಯಾವ ಭಾಷೆಯಲ್ಲಿ ಕಲಿಯಲು ಇಷ್ಟ ಎಂದು ಮಕ್ಕಳನ್ನು ಕೇಳಿದ್ದೇವೆಯೇ?' ಮಕ್ಕಳನ್ನು ಸ್ವತಂತ್ರ ವ್ಯಕ್ತಿತ್ವವುಳ್ಳ ವ್ಯಕ್ತಿಗಳು ಎಂದು ನಾವು ಪರಿಗಣಿಸುವುದೇ ಇಲ್ಲ. ಹಾಗಾಗಿ ಮಗುವಿನ ಆಯ್ಕೆ, ಇಷ್ಟ ಅನಿಷ್ಟಗಳನ್ನು, ಅದರ ನೋವು ಆತಂಕಗಳನ್ನು ನಾವು ಗಂಭೀರವಾಗಿ ಪರಿಗಣಿಸುವುದೇ ಇಲ್ಲ. 'ಮಗುವಿಗೆ ಏನೂ ತಿಳಿಯುವುದಿಲ್ಲ' ಎಂದು ಹೇಳುತ್ತ ದೊಡ್ಡವರೇ ಮಗುವಿನ ಬಗ್ಗೆ ಎಲ್ಲ ಆಯ್ಕೆಗಳನ್ನು, ನಿರ್ಧಾರಗಳನ್ನು ಮಾಡಿಬಿಡುತ್ತೇವೆ. ಶಿಶುಕೇಂದ್ರಿತ ಶಿಕ್ಷಣದ ಬಗ್ಗೆ ನಾವು ಚರ್ಚಿಸುತ್ತಿರುವಾಗ ಬಹುಶಃ ಈ ವಿಷಯ ಬಹಳ ಮುಖ್ಯವಾಗುತ್ತದೆ. ಭಾಷೆಯ ವಿಷಯದಲ್ಲಿ ಮಗುವಿನ ಆಯ್ಕೆ ಯಾವುದು, ಯಾವ ಭಾಷೆ ಮಗುವಿಗೆ ಆತಂಕವನ್ನುಂಟುಮಾಡದೆ ಸಹಜ ಕಲಿಕೆಗೆ ಸಹಾಯ ಮಾಡುತ್ತದೆ ಎಂದು ನಾವು

ವಿಚಾರ ಮಾಡಬೇಕು. ಈ ವಿಚಾರವಾಗಿ ಮಗುವನ್ನು ಎಳ್ಳಷ್ಟೂ ಗಣನೆಗೆ ತೆಗೆದುಕೊಳ್ಳದೆ ಮಗುವಿನ ಪರವಾಗಿ ನಾವೇ ಎಲ್ಲ ನಿರ್ಧಾರಗಳನ್ನು ತೆಗೆದುಕೊಳ್ಳಲು ನಮಗೇನು ಹಕ್ಕಿದೆ?

ನೋಮ್ ಚೋಮ್‌ಸ್ಕಿಯಂತಹ ಭಾಷಾತಜ್ಞ ವ್ಯಕ್ತಿತ್ವ ವಿಕಾಸವಾಗಲು ಮಗುವಿನ ಅನಿರ್ಬಂಧಿತ ಅಭಿವ್ಯಕ್ತಿ ಬಹಳ ಮುಖ್ಯ ಎನ್ನುತ್ತಾನೆ. ಬೆಳವಣಿಗೆಯ ಮೊದಲ ಹಂತಗಳಲ್ಲಿ ಮಗು ತನಗೆ ಅನಿಸಿದ್ದನ್ನು ನಿರರ್ಗಳವಾಗಿ ಮಾತಿನಲ್ಲಿ ಹೇಳುವುದು ಸಾಧ್ಯವಾದರೆ ಅದರ ವ್ಯಕ್ತಿತ್ವ ವಿಕಾಸವಾಗುತ್ತದೆ. ಹೀಗೆ ನಿರರ್ಗಳವಾಗಿ ಅನಿಸಿದ್ದನ್ನು ಮಗು ಹೇಳಬೇಕಾದರೆ ಮಾತೃಭಾಷೆಗಿಂತ ಸಹಜವಾದದ್ದು ಬೇರೆ ಯಾವುದಾದರೂ ಇರಲು ಸಾಧ್ಯವೇ? ಮಗು ತನಗೆ ಅನಿಸಿದ್ದನ್ನು ಸುಲಲಿತವಾಗಿ ಹೇಳಲು ವಿಫಲವಾದರೆ ಅದರ ಮನಸ್ಸಿನಲ್ಲಿ ಒಂದು ಕೊರಗು, ಒಂದು ಅತೃಪ್ತಿ ಹುಟ್ಟುತ್ತದೆ. ಈ ಅತೃಪ್ತಿಗೆ ತನ್ನದೇ ಅಸಮರ್ಪಕತೆ ಕಾರಣ ಎಂದು ಮಗು ತನ್ನ ಬಗೆಗೆ ತಾನೇ ಜುಗುಪ್ಸೆ ಬೆಳೆಸಿಕೊಳ್ಳಬಹುದು. ಅರಳು ಹುರಿದಂತೆ ಮಾತನಾಡುವ ಇತರ ಮಕ್ಕಳೊಡನೆ ತನ್ನನ್ನು ಹೋಲಿಸಿಕೊಂಡು ತಾನು ಕೀಳು ಎಂದು ಭಾವಿಸಬಹುದು. ಇದರಿಂದಾಗಿ ಮಗುವಿಗೆ ಇರಬಹುದಾದ ಇತರ ಸುಪ್ತ ಸಾಮರ್ಥ್ಯಗಳೂ ಕುಂದಿಹೋಗಬಹುದು.

ಮಾತೃಭಾಷೆ ಮತ್ತು ಮಕ್ಕಳ ಹಕ್ಕುಗಳು

ಮಾತೃ ಭಾಷೆಯಲ್ಲಿ ಕಲಿಯುವುದು ಮಕ್ಕಳ ಹಕ್ಕು. ತನ್ನದಲ್ಲದ, ಅರ್ಥವಾಗದ ಭಾಷೆ ಆತಂಕಗಳ ಸರಮಾಲೆಯನ್ನೇ ಸೃಷ್ಟಿಸುತ್ತದೆ, ಕೀಳರಿಮೆಯನ್ನು ಬಿತ್ತುತ್ತದೆ. ಅಥವಾ ಅನ್ಯಮಾರ್ಗ ಕಾಣದೆ ಮಗು ಸ್ಪಂದನಹೀನವಾಗಿ ಇಡೀ ಪರಿಸರದಿಂದ ಬೇರ್ಪಟ್ಟು ತನ್ನೊಳಗೆ ಒಂದು ಗೂಡು ಕಟ್ಟಿಕೊಂಡು ತಮಸ್ಸಿಗೆ ಶರಣಾಗುತ್ತದೆ. ತನ್ನದಲ್ಲದ, ಸಂವಹನ ಸಾಧ್ಯವಾಗದ ಭಾಷೆ ಇಷ್ಟೆಲ್ಲ ದುರಂತಗಳ ಸರಣಿಯನ್ನು ಸೃಷ್ಟಿಸಿದರೂ ಮಗುವಿನ ಮೇಲೆ ಉಂಟಾಗುವ ಈ ದುಷ್ಪರಿಣಾಮಗಳು ನಮಗೆ ತಕ್ಷಣವೇ ತಿಳಿಯುವುದಿಲ್ಲ. ಅದು ತಿಳಿಯುವ ಹೊತ್ತಿಗೆ ಕೆಲವು ವರ್ಷಗಳೇ ಕಳೆದಿರುತ್ತದೆ. ಎಂಟನೇ ತರಗತಿಯ ಮಕ್ಕಳನ್ನು ನಾವು ಬಲವಂತವಾಗಿ ಇಂಗ್ಲಿಷ್ ಮೀಡಿಯಂಗೆ ಸೇರಿಸಿದಾಗ ಅವರು ಭಯಭೀತರಾಗಿ ಓಡಿಬಂದು ಪುನಃ ತಮ್ಮನ್ನು ಕನ್ನಡ ಮೀಡಿಯಂ ತರಗತಿಗೆ ಕಳುಹಿಸಬೇಕೆಂದು ಗೋಗರೆಯುವುದನ್ನು ನೋಡಿದ್ದೇನೆ. ಎಂಟನೇ ತರಗತಿಯ ಮಕ್ಕಳ ಗತಿಯೇ ಹೀಗಾದಾಗ ಪ್ರಾಥಮಿಕ ಹಂತದ ಮಕ್ಕಳ ಗತಿಯೇನು? ಮಾತೃಭಾಷೆಯಲ್ಲಿ ಕಲಿಯುವ ಮಕ್ಕಳ ಹಕ್ಕನ್ನು ನಮ್ಮ ಮಕ್ಕಳ ಹಕ್ಕುಗಳು ಸ್ಪಷ್ಟವಾಗಿ ಎತ್ತಿ ಹಿಡಿಯದೇ ಇರುವುದು ದುರದೃಷ್ಟಕರ. ಮಕ್ಕಳ ಹಕ್ಕುಗಳು ಪರಿಚ್ಛೇದ ಮೂವತ್ತರಲ್ಲಿ ಹೀಗೆ ಹೇಳಿದೆ: 'ಮಕ್ಕಳು ನಗರ, ಹಳ್ಳಿ, ಕೊಳೆಗೇರಿ, ಬುಡಕಟ್ಟು, ಮುಂತಾದ ಯಾವುದೇ ಹಿನ್ನಲೆಯಿಂದ ಬಂದಿರಬಹುದು, ಯಾವುದೇ ಮಾತೃಭಾಷೆಯನ್ನು ಆಡಬಹುದು. ಆದರೂ ಈ

ಮಕ್ಕಳ ಭಾಷೆ, ಆಚಾರ, ವಿಚಾರ ಮುಂತಾದುವುಗಳನ್ನು ಶಾಲೆಯ ವ್ಯವಸ್ಥೆ ಹೀಗಳೆಯುವಂತಿಲ್ಲ.' ಎಂದರೆ ಯಾವುದೇ ಜನಸಮುದಾಯ ಆಚರಿಸಿಕೊಂಡು ಬಂದಿರುವ ಈ ಅಂಶಗಳು ಕೀಳು ಎಂಬಂಥ ಭಾವನೆ ಬರದಂತೆ ವಿಶಾಲ ಮನೋಧರ್ಮವನ್ನು ಬುದ್ಧಿಪೂರ್ವಕವಾಗಿ ಮಕ್ಕಳಲ್ಲಿ ಬೆಳೆಸುವ ಪ್ರಯತ್ನ ಮಾಡಬೇಕು. ಈ ಹೇಳಿಕೆಯ 'ಭಾಷೆ' ಭಾಗವನ್ನು ನಾವು ಪ್ರಧಾನವಾಗಿಟ್ಟುಕೊಂಡು ಮಗುವಿನ ಭಾಷೆಯಲ್ಲದ ಇಂಗ್ಲಿಷ್‌ನ್ನು ಮಗುವಿನ ಮೇಲೆ ಹೇರುವುದು ಕಾನೂನು ಉಲ್ಲಂಘನೆ ಎಂದು ವಾದಿಸಬಹುದೇ? ಕಾನೂನುತಜ್ಞರು ಇದನ್ನು ಸ್ಪಷ್ಟಪಡಿಸಬೇಕು. ತಾಂತ್ರಿಕವಾಗಿ ಮಾತನಾಡುವುದಾದರೆ ಮಗುವಿನ ಮಾತೃಭಾಷೆಯ ಸ್ಥಾನವನ್ನು ಇಂಗ್ಲೀಷ್ ಭಾಷೆಯಿಂದ ಸ್ಥಳಾಂತರಿಸುವುದು ಮಗುವಿಗೆ ಮಾಡುವ ದ್ರೋಹ ಎಂದು ಪರಿಗಣಿಸಬಹುದು. ಈ ಬಗ್ಗೆ ಗಾಂಧೀಜಿಯವರ ಅಭಿಪ್ರಾಯ ಹೀಗಿದೆ: "ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣ ಕೊಡುವ ವಿಚಾರದ ಬಗ್ಗೆ ಪೋಲಾಕ್ ಹಾಗೂ ನಾನು ಆಗಾಗ ತೀವ್ರ ವಾಗ್ವಾದಕ್ಕಿಳಿಯುತ್ತಿದ್ದೆವು. ಶೈಶವದಿಂದಲೇ ಇಂಗ್ಲಿಷ್‌ನಲ್ಲಿ ಯೋಚಿಸಲು ಹಾಗೂ ಮಾತನಾಡಲು ತಮ್ಮ ಮಕ್ಕಳಿಗೆ ಕಲಿಸುವ ಭಾರತೀಯ ತಂದೆತಾಯಿಗಳು ತಮ್ಮ ಮಕ್ಕಳು ಹಾಗೂ ತಮ್ಮ ರಾಷ್ಟ್ರವನ್ನು ವಂಚಿಸುತ್ತಿರುತ್ತಾರೆ ಎಂಬುದೇ ಯಾವಾಗಲೂ ನನ್ನ ನಂಬಿಕೆಯಾಗಿತ್ತು. ರಾಷ್ಟ್ರದ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಪರಂಪರೆಗಳಿಂದ ದೂರವಾಗಿಸಿ ರಾಷ್ಟ್ರದ ಸೇವೆಗೆ ಅವರನ್ನು ಅನರ್ಹರನ್ನಾಗಿಸುವಂತಹದ್ದು ಇದು." (ಗುಹಾಂಕಣ–ರಾಮಚಂದ್ರ ಗುಹ) ಇದೇ ಸಂದರ್ಭದಲ್ಲಿ ಗಾಂಧೀಜಿಯವರ ಮತ್ತೊಂದು ಮಾತು ಮನೋಜ್ಞವಾಗಿದೆ. ಮಗು ಶಿಶುವಾಗಿರುವಾಗ ಏನನ್ನು ಕಲಿಯುತ್ತದೋ ಅದನ್ನು ಅನಂತರದ ವರ್ಷಗಳಲ್ಲಿ ಕಲಿಯಲು ಅದಕ್ಕೆ ಸಾಧ್ಯವಾಗುವುದೇ ಇಲ್ಲ. ಈ ಅಂಶವನ್ನು ಗಾಂಧೀಜಿಯವರ ಮಾತುಗಳಲ್ಲೇ ಹೇಳುವುದಾದರೆ– "ಮಗು ತನ್ನ ಬಾಲ್ಯದ ಮೊದಲ ಐದು ವರ್ಷಗಳಲ್ಲಿ ಏನನ್ನೂ ಕಲಿತಿರುವುದಿಲ್ಲವೆಂಬ ತಪ್ಪು ಕಲ್ಪನೆ ಪ್ರಚಾರದಲ್ಲಿದೆ. ವಾಸ್ತವವಾಗಿ ಬಾಲ್ಯದ ಮೊದಲ ಐದು ವರ್ಷಗಳಲ್ಲಿ ಕಲಿಯದೇ ಇದ್ದುದನ್ನು ಮಗು ಬಳಿಕ ಕಲಿಯುವುದೇ ಇಲ್ಲ ಎಂಬುದನ್ನು ಮರೆಯಬಾರದು. ಮಗುವಿನ ಶಿಕ್ಷಣ, ಗರ್ಭಾವಸ್ಥೆಯಿಂದಲೇ ಆರಂಭವಾಗುತ್ತದೆ ಎಂಬುದೇ ಸತ್ಯ ವಿಚಾರ." ಶಿಶುವಾಗಿರುವಾಗ ಮಗು ತನ್ನ ಅನುಭವವನ್ನು ಮೈಗೂಡಿಸಿಕೊಳ್ಳಬೇಕಾದರೆ ಮಾತೃಭಾಷೆಗಿಂತ ಉತ್ತಮವಾದದ್ದು ಯಾವುದಿದೆ? ಮಾತೃಭಾಷೆಯ ಜೊತೆಗೆ ತರಗತಿಯಲ್ಲಿ ಅನಿವಾರ್ಯವಾಗಿ ಇರಬಹುದಾದ ಬಹುಭಾಷಾ ಪರಿಸರವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕೆಂದು ನಮ್ಮ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಹೇಳುತ್ತದೆ. ಈ ಬಹುಭಾಷಾ ಪರಿಸರದಲ್ಲಿ ಇಂಗ್ಲಿಷ್ ಒಂದು ಅಸಂಬದ್ಧತೆಯನ್ನು ತಂದಿಡುವುದರಲ್ಲಿ ಸಂದೇಹ ಇಲ್ಲ. ಜೊತೆಗೆ ಇಂಗ್ಲಿಷ್ ಭಾರತದ ಯಾರ ಮಾತೃಭಾಷೆಯೂ ಅಲ್ಲ. ಅದರ ರಚನೆ ನಮ್ಮ ಸ್ಥಳೀಯ ಭಾಷೆಗಳನ್ನು ಹೋಲದಿರುವುದರಿಂದ ಅದು ಆಗಂತುಕ ಭಾಷೆಯಾಗಿಯೇ ಉಳಿಯುತ್ತದೆ.

ಈ ಸಂದರ್ಭದಲ್ಲಿ ಲಾರಾ ಆಂದರ್ಸ್ ಬೇರ್ ಮತ್ತು ರಾಬರ್ಟ್ ಎಂಬ ತಜ್ಞರು ಹೇಳುವ ಮಾತು ಮನೋಜ್ಞವಾಗಿದೆ– "ದ್ವಿಭಾಷಾ ಪರಿಸರದಲ್ಲಿ ಓದಲೇಬೇಕಾದ ಮಕ್ಕಳಬಗ್ಗೆ ನಡೆದಿರುವ ಅಧ್ಯಯನಗಳು ನಮಗೆ ತಿಳಿಸುವುದೇನೆಂದರೆ ಮಾತೃಭಾಷೆಯಲ್ಲಿ ಮಗು ಕಲಿತ ಅವಧಿ ಹೆಚ್ಚಾದಷ್ಟೂ ಅದು ಆಯಾ ಮಕ್ಕಳ ಶೈಕ್ಷಣಿಕ ಯಶಸ್ಸಿಗೆ ಇತರೆಲ್ಲ ಅಂಶಗಳಿಗಿಂತಲೂ ಹೆಚ್ಚು ಕಾರಣವಾಗುತ್ತದೆ."*

ಭಾಷೆ ಒಂದು ಜೀವನಕ್ರಮ

ಶತಮಾನಗಳಿಂದಲೂ ವಿಕಾಸಗೊಂಡ ಮನುಷ್ಯನ ಜೀವನ–ಚಿಂತನಕ್ರಮಕ್ಕೆ ಅನುಗುಣವಾಗಿ ಭಾಷೆ ಆಯಾ ಪ್ರದೇಶಗಳಲ್ಲಿ ಬೆಳೆದಿರುತ್ತದೆ. ವಿಸ್ತಾರವಾದ ಭಾವಸಮುದ್ರದಿಂದ ಸಂವಹನ ಸಾಧ್ಯವಾಗುವ ಕೆಲವು ನಿರ್ದಿಷ್ಟ ಅಂಶಗಳನ್ನಾದರೂ ವ್ಯಕ್ತಪಡಿಸುವ ವಾಹಕವಾಗುತ್ತದೆ ಭಾಷೆ. ಈ ಭಾವನೆಗಳಿಗೆ ಅಭಿವ್ಯಕ್ತಿ ಕಲ್ಪಿಸುವ ವ್ಯಕ್ತ ಶಬ್ದರೂಪವಾಗಿ, ವಿಶಾಲವಾದ ಸಾಂಸ್ಕೃತಿಕ ಪರಿಧಿಯ ಅನೇಕ ಮಜಲುಗಳಿಗೆ ಕೊಂಡಿಯಾಗಿ ಭಾಷೆ ಕೆಲಸ ಮಾಡುತ್ತದೆ. ಒಂದು ಭಾಷೆಯನ್ನು ಅದಕ್ಕೆ ಸಂಬಂಧಪಟ್ಟ ಸಂಸ್ಕೃತಿಯ ಹೊರತಾಗಿ ಭಾವಿಸಲಾಗುವುದಿಲ್ಲ. ಅಥವಾ ಸಾಂಸ್ಕೃತಿಕ ಸಂಬಂಧವಿಲ್ಲದೆ ಬಳಸಿದ ಭಾಷೆ ಸೀಮಿತ ಅರ್ಥಗಳನ್ನು ಮಾತ್ರ ಧ್ವನಿಸಿ ಬಳಕೆದಾರರ ವ್ಯಕ್ತಿತ್ವವನ್ನು ಕುಬ್ಜವಾಗಿಸುತ್ತದೆ. ಇಂತಹ ಭಾಷೆಯ ಬಳಕೆಯಿಂದ ಸಾಧ್ಯವಾಗುವ ಸಂವಹನ ಅಸಹಜ ವ್ಯಕ್ತಿತ್ವವನ್ನು ರೂಪಿಸುವುದು ಖಚಿತ. ಪ್ರಸ್ತುತ ಸಂದರ್ಭದಲ್ಲಿ ಹೇಳಬೇಕೆಂದರೆ ಅದು 'ಕಂಪ್ಯೂಟರ್–ಇಂಗ್ಲಿಷ್–ಹಣ–ಒಣಜಂಬ' ಇಷ್ಟನ್ನು ಮಾತ್ರ ತನ್ನ ಬಳಕೆದಾರನಿಗೆ ಕೊಡುತ್ತದೆ. ಬಹುಶಃ ಈ ಅಂಶವನ್ನು ಮನಗಂಡೇ ನಮ್ಮ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು ರೋಸಿ ಹೋಗಿ 'ಇಂಗ್ಲಿಷ್ ಒಂದು ಕೊಲೆಗಡುಕ ಭಾಷೆ' ಎಂದು ಹೇಳಿರಬಹುದು.

ಮಾತೃಭಾಷೆಯ ಮೂಲಕ ನಾವು ನಮಗೆ ಬಹಳ ಆಪ್ತವಾಗಿರುವ ಸಂಗತಿಗಳನ್ನು ಹೇಳಿಕೊಳ್ಳಲು ಸಾಧ್ಯ. ಇಂತಹ ಭಾಷಾ ಸಾಮರ್ಥ್ಯವನ್ನು ಕಳೆದುಕೊಂಡರೆ ನಾವು ಆಪ್ತವಾದ ಯಾವುದನ್ನೂ ಹೇಳಿಕೊಳ್ಳಲು ಪ್ರಯತ್ನಿಸುವುದೇ ಇಲ್ಲ. ಅನಿವಾರ್ಯವಾಗಿ ನಾವು ನಮ್ಮ ಗ್ರಾಮೀಣ ನುಡಿಗಟ್ಟುಗಳಿಂದ ದೂರವಾಗುತ್ತೇವೆ, ನಮ್ಮ ಸಂಸ್ಕೃತಿಯಲ್ಲಿ ತಲೆತಲಾಂತರಗಳಿಂದ ರೂಪುಗೊಂಡ ಮನುಷ್ಯಸಂಬಂಧಗಳಿಗೆ, ಮೌಲ್ಯಗಳಿಗೆ ಧ್ವನಿ

*"it is clear from many studies that the length of mother tongue medium education is more important than any factor in predicting the education success of bilingual students." (from expert paper for the united nations permanent forum on indegenous issues. presented by lars-Anders Baer in collabaration with Rober.

ನೀಡಲಾರದೆ ಸೋತುಹೋಗುತ್ತೇವೆ. ಪರ್ಯಾಯವಾಗಿ ಅನುಕರಣೆಯ ಸಂಸ್ಕೃತಿಗೆ ಶರಣಾಗುತ್ತೇವೆ. ಹೀಗೆ ಒಂದು ಸಂಸ್ಕೃತಿಗೂ ಭಾಷೆಗೂ ಬಿಡಿಸಲಾಗದ ಸಂಬಂಧವಿದೆ. ಭಾಷೆ ಸಾಯುವುದು ಎಂದರೆ ಸಹಸ್ರಮಾನಗಳ ಸಾಂಸ್ಕೃತಿಕ ಚರಿತ್ರೆಯ ಸಾವು ಎಂದು ಅರ್ಥ ಮಾಡಿಕೊಳ್ಳಬಹುದು.

ಅನೈತಿಕ ಯಶಸ್ಸಿಗಾಗಿ ಇಂಗ್ಲಿಷ್ ಬೇಡಿಕೆ

ಈ ವಾದಸರಣಿಯ ಮೂಲಕ ಇಂಗ್ಲಿಷ್ ಭಾಷಾ ಸಾಹಿತ್ಯವನ್ನೂ, ಅದರಲ್ಲಡಗಿರುವ ಬೌದ್ಧಿಕ ಸೈದ್ಧಾಂತಿಕ ನಿಲುವುಗಳನ್ನೂ, ಔದಾರ್ಯವನ್ನೂ ನಾನು ಹಳಿಯುತ್ತಿಲ್ಲ. ಬಾವಿಯ ಕಪ್ಪೆಯಾಗಬೇಕೆಂಬುದು ಇದರ ಅರ್ಥವಲ್ಲ. ಸದಾ ವಿಸ್ತಾರಗೊಳ್ಳುವ ಗುಣ, ವಿಕಾಸದ ಮನೋಧರ್ಮ ಕನ್ನಡಿಗರಿಗಷ್ಟೇ ಏಕೆ ಎಲ್ಲ ಭಾಷೆಗಳನ್ನು ಮಾತನಾಡುವವರಿಗೂ ಇರಬೇಕು. ಆದರೆ ಇಂಗ್ಲಿಷ್ ಭಾಷೆ ಕೇವಲ ಹಣದ, ಅನೈತಿಕ ಯಶಸ್ಸಿನ ದ್ಯೋತಕವಾಗಿ ಇಂದು ಪ್ರಾಥಮಿಕ ಹಂತದಲ್ಲಿ ಬೇಡಿಕೆಗೆ ಬರುತ್ತಿದೆ. ಇಂಗ್ಲಿಷ್ ಅನ್ನ ಕೊಡುವ ಭಾಷೆ ಎಂಬ ಮಿಥ್ಯಾಕಲ್ಪನೆಯನ್ನು ನಮ್ಮ ನಡುವಿನ ಬಿಳಿಕೊರಳಪಟ್ಟಿಯ ಮೂರ್ಖರು ಬಿತ್ತುತ್ತಿದ್ದಾರೆ. ವಿಷಾದದ ಸಂಗತಿಯೆಂದರೆ ಇಂಗ್ಲಿಷ್ ಅನ್ನದ ಭಾಷೆಯಾಗುವುದು ಪ್ರತಿಷ್ಠಿತ ವರ್ಗದ ಕೆಲವರಿಗೆ ಮಾತ್ರ. ಒಂಟೆಯ ಮುಂದೆ ಎಟುಕದ ಕ್ಯಾರೆಟ್ ಹಿಡಿದು ಅದನ್ನು ಮರಳುಗಾಡಿನಲ್ಲಿ ನೀರಿಲ್ಲದೆ ನಡೆಸುವ ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳ ಜಾಣತನವಿದು. ಕನ್ನಡ ಮಾಧ್ಯಮದಲ್ಲೇ ಕಲಿತ ಅನೇಕರು ಅದ್ಭುತವಾದ ಯಶಸ್ಸನ್ನು ಗಳಿಸಿರುವುದು ನಮ್ಮ ಕಣ್ಣಮುಂದೆಯೇ ಇದೆ. ಜೊತೆಗೆ ನಮ್ಮ ಬಹುಸಂಖ್ಯಾತ ಮಕ್ಕಳು ಹತ್ತನೆಯ ತರಗತಿಗೆ ಮುಂಚೆಯೇ ಶಾಲೆ ತೊರೆದುಬಿಡುವುದರಿಂದ ಈ ಮಕ್ಕಳಿಗೆ ಜೀವನದಲ್ಲಿ ಇಂಗ್ಲಿಷ್ ಬಳಸುವ ಅಥವಾ ಕಂಪ್ಯುಟರ್ ಬಳಸುವ ಅನಿವಾರ್ಯತೆಯೇ ಬರುವುದಿಲ್ಲ. ಅವಕಾಶಗಳನ್ನು ದರೋಡೆಕೋರರಂತೆ ಬಾಚಿಕೊಳ್ಳುವ ನಮ್ಮ ಶ್ರೀಮಂತರ ಮಕ್ಕಳಿಗೆ ಇಂಗ್ಲಿಷ್ ಅಥವ ಕಂಪ್ಯುಟರ್‌ಗಳು ಉಪಯೋಗಕ್ಕೆ ಬರುತ್ತವೆ. ನಮ್ಮ ಸರ್ಕಾರಿ ವ್ಯವಸ್ಥೆ ಇದಕ್ಕೆ ಪೂರಕವಾಗಿ ಕೆಲಸಮಾಡುತ್ತಿದೆ.

ಇಂಗ್ಲಿಷ್‌ನ ಹಂಗಿಲ್ಲದೆ ಪ್ರಗತಿ

ಫ್ರಾನ್ಸ್, ಜರ್ಮನಿಯಂತಹ ದೇಶಗಳು ಇಂಗ್ಲಿಷ್ ಭಾಷೆಯನ್ನು ಬಳಸಿಕೊಳ್ಳದೆ ತಂತ್ರಜ್ಞಾನದ ಪ್ರಗತಿಯನ್ನು ಸಾಧಿಸಿದವು. ಇದಕ್ಕೆ ಚಾರಿತ್ರಿಕ ಕಾರಣಗಳಿವೆ. ಈ ದೇಶಗಳಿಗೆ ವಿಜ್ಞಾನದ ಸಂಪದ್ಭರಿತ ಚರಿತ್ರೆ ಇದೆ. ಭಾರತದಲ್ಲಿ ವಿಜ್ಞಾನ ಸಂಸ್ಕೃತಿಯ ಕೊರತೆ ಎದ್ದುಕಾಣುತ್ತದೆ. ಈ ವಿಜ್ಞಾನದ ಸಾಂಸ್ಕೃತಿಕ ಕೊರತೆಯನ್ನು ನಮ್ಮ ಪ್ರಾದೇಶಿಕ ಭಾಷೆಗಳು ಭರಿಸಲಾರವು. ಇಂಗ್ಲಿಷ್ ಭಾಷೆ ಹೇಗೆ ಭಾರತದ ಸಾಂಸ್ಕೃತಿಕ ಅನನ್ಯತೆಯನ್ನು

ತುಂಬಿಕೊಡಲಾರದೋ ಅದೇ ರೀತಿ ಭಾರತೀಯ ಭಾಷೆಗಳು ತಮ್ಮದಲ್ಲದ ವಿಜ್ಞಾನದ ಸಂಸ್ಕೃತಿಗೆ ಪೂರಕವಾಗಿ ನಿಲ್ಲಬೇಕಾದರೆ ಈ ಹೊಸ ಶಾಖೆಗಾಗಿ ತನ್ನ ಪರಿಭಾಷೆಯನ್ನು ವಿಸ್ತರಿಸಿಕೊಳ್ಳಬೇಕು. ಇಂಗ್ಲೀಷ ಭಾಷೆ ಹೀಗೆ ಲ್ಯಾಟಿನ್‌ನಿಂದ ಗ್ರೀಕ್‌ನಿಂದ ಅನೇಕ ಪದಗಳನ್ನು ಬಳಸಿಕೊಂಡಿತು. ಸತತವಾದ ಪ್ರಯತ್ನದಿಂದ ಇಂದಿನ ಇಂಗ್ಲಿಷ್ ವಿಜ್ಞಾನ ವಿಷಯಗಳ ಸಂವಹನಕ್ಕೆ ಅಣಿಯಾಯಿತು. ಕನ್ನಡವನ್ನು ವಿಜ್ಞಾನಕ್ಕಾಗಿ ಉಪಯೋಗಿಸುವ ಪ್ರಯತ್ನವನ್ನೂ ಮಾಡದೆ ಕನ್ನಡದಲ್ಲಿ ವಿಜ್ಞಾನ ಸಾಧ್ಯವೇ ಇಲ್ಲ ಎಂಬ ತೀರ್ಮಾನಕ್ಕೆ ಬರುವುದು ಎಷ್ಟು ಸರಿ? ಅಗತ್ಯವಿದ್ದಲ್ಲಿ ಇಂಗ್ಲಿಷ್ ಪದಗಳನ್ನು ಬಳಸಬಹುದು. ಇದೊಂದು ಪಾಪದ ಕೆಲಸವೇನೂ ಅಲ್ಲ. ಆದರೆ ಯಾವುದನ್ನು ಎಲ್ಲಿ ಎಷ್ಟು ಬಳಸಬೇಕೆಂಬ ಪರಿಜ್ಞಾನ ನಮಗೆ ಬೇಡವೇ?

ಗ್ರಾಮೀಣ ಪ್ರದೇಶಗಳಲ್ಲಿನ ಇಂಗ್ಲಿಷ್ ಭಾಷಾ ವಾತಾವರಣ

ಮತ್ತೊಂದು ಬಹುಮುಖ್ಯವಾದ ಪ್ರಶ್ನೆಯೆಂದರೆ ಒಳ್ಳೆಯ ಇಂಗ್ಲಿಷ್ ಕಲಿಸಲು ಇಂಗ್ಲಿಷ್ ಬಲ್ಲ ಪ್ರಾಥಮಿಕ ಶಾಲೆಯ ಅಧ್ಯಾಪಕರನ್ನು ಹುಡುಕುವುದೆಲ್ಲಿ? ಇಂದು ಗ್ರಾಮೀಣ ಪ್ರದೇಶಗಳ ಹೈಸ್ಕೂಲು ಕಾಲೇಜುಗಳಲ್ಲೇ ಸರಿಯಾಗಿ ಇಂಗ್ಲಿಷ್ ಬಲ್ಲ ಅಧ್ಯಾಪಕರು ಇರುವುದು ಅಪರೂಪ. ಒಂದು ಭಾಷೆಯನ್ನು ಕಲಿಯಬೇಕಾದರೆ ಆ ಭಾಷಾ ವಾತಾವರಣ ಕಲಿಕೆಗೆ ಸಹಾಯ ಮಾಡುತ್ತದೆಯಾದ್ದರಿಂದ ಭಾಷೆಯ ಕಲಿಕೆ ಕಷ್ಟಸಾಧ್ಯವಲ್ಲ. ಆದರೆ ಇಂದು ಇಂಗ್ಲಿಷ್ ಭಾಷೆಯ ವಾತಾವರಣದ ಗಂಧವೂ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಇಲ್ಲ. ಮೊದಲನೆಯದಾಗಿ ಇಂಗ್ಲಿಷ್ ಭಾಷೆಗೆ ಕನ್ನಡಕ್ಕಿಂತ ಭಿನ್ನವಾದ ತನ್ನದೇ ಆದ ಒಂದು ರಚನೆ (Structure) ಇದೆ, ಒಂದು ಸ್ವರೂಪ ಇದೆ. ಆ ರಚನೆಯನ್ನು ಎಲ್ಲ ಅಧ್ಯಾಪಕರೂ ಎಲ್ಲ ಸಮಯದಲ್ಲೂ ಏಕರೀತಿಯಲ್ಲಿ ಉಳಿಸಿಕೊಂಡು ಸಂವಹನ ಮಾಡಿದರೆ ಮಕ್ಕಳಿಗೆ ಭಾಷೆಯ ರಚನೆ ಅರ್ಥವಾಗಿ, ಆ ಭಾಷೆಯಲ್ಲಿ ನಂಬಿಕೆ ಹುಟ್ಟಿ ಆ ಭಾಷೆ ಸಂವಹನಯೋಗ್ಯ ಎಂಬ ಆತ್ಮವಿಶ್ವಾಸ ಉಂಟಾಗುತ್ತದೆ. ಆಗ ಆ ಭಾಷೆಯನ್ನು ಬಳಸುತ್ತಾರೆ. ಆದರೆ ಇಂಗ್ಲಿಷ್ ಭಾಷೆಯನ್ನು ಒಬ್ಬೊಬ್ಬರು ಒಂದೊಂದು ರೀತಿ ಬಳಸಿದರೆ ಮಗುವಿಗೆ ಅರ್ಥವಾಗುವುದಾದರೂ ಏನು? ಶಿಕ್ಷಕರ ಕಾರ್ಯಾಗಾರವೊಂದರಲ್ಲಿ ಇಂಗ್ಲಿಷ್‌ನಲ್ಲಿ ಮಾತನಾಡಲು ಹೆದರುತ್ತಿದ್ದ ಒಬ್ಬ ಅಧ್ಯಾಪಕನಿಗೆ ಅವನಿಗಿಂತ ಕೆಟ್ಟ ಇಂಗ್ಲಿಷ್‌ಅನ್ನು ನಿಸ್ಸಂಕೋಚವಾಗಿ ಮಾತನಾಡಬಲ್ಲ ಅವನ ಮೇಲಧಿಕಾರಿ ಹೀಗೆ ಧೈರ್ಯ ಕೊಡುತ್ತಿದ್ದ: 'ನಾವು ಇಂಗ್ಲಿಷ್ ಮಾತನಾಡಲು ಹೆದರಬಾರದು; ತಪ್ಪಾದರೂ ಚಿಂತೆಯಿಲ್ಲ ತರಗತಿಯಲ್ಲಿ ತಪ್ಪೋ ನೆಪ್ಪೋ ಇಂಗ್ಲಿಷ್‌ನಲ್ಲೇ ಮಾತನಾಡಬೇಕು.'

ಹೀಗೆ ತರಗತಿಯಲ್ಲಿ ತಪ್ಪು ತಪ್ಪು ಇಂಗ್ಲಿಷ್ ಮಾತನಾಡುತ್ತಾ ಅಧ್ಯಾಪಕರು ತಾವೇ ಸ್ವಯಂ ಕಲಿಕೆಯಲ್ಲಿ ತೊಡಗಿದರೆ ಮಕ್ಕಳ ಗತಿ ಏನು? ಇಂಗ್ಲಿಷ್ ಇಂದು

ಬೇಡಿಕೆಯಲ್ಲಿರುವುದಕ್ಕೆ ಕಾರಣ ಅದೂ ಕೂಡ ಒಂದು ಅದ್ಭುತವಾದ ಭಾಷೆ ಎಂಬ ಕಾರಣಕ್ಕಾಗಿ ಅಲ್ಲ. ಈ ಭಾಷೆಯ ಜೊತೆಗೆ ಬೆಸೆದುಕೊಂಡಿರುವ ನಗರಜೀವನದ, ಬಣ್ಣದ ಬದುಕಿನ ಸಾಧ್ಯತೆಗಳು ನಮ್ಮ ಮುಗ್ಧ ಜನರನ್ನು ಮರುಳು ಮಾಡುತ್ತಿವೆ. ಈ ಅವಾಸ್ತವ ಕನಸುಗಳ ಕನವರಿಕೆಯಲ್ಲಿ ಜನಸಾಮಾನ್ಯರು ಮುಗ್ಧರಾಗಿ ಹೋಗಿದ್ದಾರೆ.

ಈ ದೌರ್ಬಲ್ಯವನ್ನೇ ಬಂಡವಾಳ ಮಾಡಿಕೊಂಡ ನಮ್ಮ ಖಾಸಗಿ ಶಾಲೆಗಳು ಇಂಗ್ಲಿಷ್ ನೆಪದಲ್ಲಿ ಜನರಿಂದ ಯದ್ವಾತದ್ವಾ ಹಣ ವಸೂಲಿ ಮಾಡುತ್ತಿವೆ. ಇಂಗ್ಲಿಷ್ ದಯಪಾಲಿಸುವ ಈ ಹುಸಿ ಆಶ್ವಾಸನೆಯ ಬಗ್ಗೆ ಜನ ಜಾಗೃತರಾಗುವಂತೆ ಮಾಡಬೇಕಾದ್ದು ಇಂಗ್ಲಿಷ್ ಕಲಿಕೆಗಿಂತ ಬಹಳ ಮುಖ್ಯ.